

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 | Issue : 307 | Thursday 21-08-2025 | E-mail : maruti.b.hosamani76@gmail.com | Page: 4 | Price : Rs. 1/-


## ವಸತಿ ನಿಲಯದಲ್ಲಿ ಮೂಲ ಸೌಕರ್ಯಗಳ ಕೊರತೆ – ವಿದ್ಯಾರ್ಥಿಗಳ ಗೋಳು! ಕೇಳುವವರು ಯಾರು.....?



**ಸಿಹಿ ಕಹಿ ಸುದ್ದಿ,**
**ಮುಶಿಗೇರಿ :** ಪ್ರಿಯ ಓದುಗರೇ ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಹಿತ ದೃಷ್ಟಿಯಿಂದವಸತಿನಿಲಯಗಳನ್ನು ಪ್ರಾರಂಭಿಸಲಾಗಿದೆ. ಆದ–ರೆ ವಸತಿ ನಿಲಯ–ಕ್ಕೆ ಮೂಲ ಸೌಕರ್ಯಗಳಿಲ್ಲದೆ ವಿದ್ಯಾರ್ಥಿಗಳು ದಿನ ನಿತ್ಯ ಸಂಕಷ್ಟ ಎದುರಿಸುತ್ತಿದ್ದರೂಅವರಗೋಳು ಕೇಳುವವರೇ ಇಲ್ಲದಂತಾಗಿದೆ.


ಆತ್ಮೀಯ ಓದುಗರೇ ಗದಗ ಜಿಲ್ಲೆಯ ಗಜೇಂದ್ರಗಡ ತಾಲೂಕಿನ ಮುಶಿಗೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಡಿ.ದೇವರಾಜ ಅರಸು ಬಾಲಕರ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯದಲ್ಲಿರುವ ವಿದ್ಯಾರ್ಥಿಗಳು ಮೂಲ ಸೌಕರ್ಯಗಳ ಸಮಸ್ಯೆಯನ್ನು ಎದುರಿಸುತ್ತಿದ್ದು, ಅಭ್ಯಾಸ ಮಾಡಲು ಸಮಸ್ಯೆ ಆಗುತ್ತಿದೆ. ಎಂದು ಹೇಳುತ್ತಿದ್ದಾರೆ. ವಸತಿ ನಿಲಯದ ಕೊಠಡಿಗಳ ಬಾಗಿಲು, ಕದಗಳು ಹಾಳಾಗಿವೆ, ಕಿಟಕಿ ಸರಿಯಾಗಿ ಇಲ್ಲೆ. ರಾತ್ರಿ ಹೊತ್ತು ಒಡೆದ ಕಿಟಕಿಗಳ ಮೂಲಕ ಸೊಳ್ಳೆಗಳು ನುಸುಳಿ ಇನ್ನಿಲ್ಲದಂತೆ ಸಮಸ್ಯೆ ಯಾಗುತ್ತಿದೆ. ಇದರಿಂದ ವಿದ್ಯಾರ್ಥಿಗಳಿಗೆ ಆರೋಗ್ಯದಲ್ಲಿ ಏರುಪೇರು ಆಗುತ್ತಿದೆ. ಕೊಠಡಿಯಲ್ಲಿ ಫ್ಯಾನ್ ಕೂಡ ಇಲ್ಲಾ. ಕೆಲವು ಕಡೆ ಇದ್ದರೂ ಸರಿಯಾಗಿ ಕೆಲಸ ಮಾಡಲ್ಲಾ. ಎಲ್ಲಾ ಕೊಠಡಿಗಳಲ್ಲಿ ವಿದ್ಯುತ್ ಸಂಪರ್ಕವಿಲ್ಲ. ವಾಯರಿಂಗ್ ಸರಿಯಾಗಿ ಮಾಡದೆ ಹಾಗೆಯೇ ಬಿಟ್ಟಿದ್ದು, ವಿದ್ಯಾರ್ಥಿಗಳ ಜೀವದ ಜೊತೆಗೆಆಟಆಡುತ್ತಿದ್ದಾರೆಎಂದು ಪೋಷಕರುಆರೋಪಿಸುತ್ತಿದ್ದಾರೆ. ವಸತಿ ನಿಲಯ ಕೊಠಡಿಗಳು ಶಿಥಿಲೀಕರಣ ಗೊಂಡಿವೆ. ಅಲ್ಲಲ್ಲಿ ಬಿರುಕು ಬಿಟ್ಟಿವೆ. ಸುಮಾರು ವರ್ಷಗಳಿಂದ ಮಳೆಗಾಲ ಬಂದ–ರೆ ಕೊಠಡಿಗಳು ಸೋರುತ್ತಿವೆ. ಇದರಿಂದ ವಿದ್ಯಾರ್ಥಿಗಳು ದಿನ ನಿತ್ಯ ಮಲಗಿ ಕೊಳ್ಳಲು, ಅಭ್ಯಾಸ ಮಾಡಲು ಸಮಸ್ಯೆ ಆಗುತ್ತಿದೆ. ವಸತಿ ನಿಲಯದ ಮುಂದೆ ಮಳೆ ನೀರು ನಿಲ್ಲುತ್ತಿದೆ.

ವಿದ್ಯಾರ್ಥಿಗಳಿಗೆ ಓಡಾಡಲು ಕನಿಷ್ಠ ರಸ್ತೆಯೂ ಇಲ್ಲದೆ ತೊಂದ–ರೆ ಯಾಗುತ್ತಿದೆ. ಇದ್ಯಾವುದರ ಬಗ್ಗೆಯೂ ತಲೆ ಕೆಡಿಸಿ ಕೊಳ್ಳದ ಅಧಿಕಾರಿಗಳು ತೀವ್ರ ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿದ್ದಾರೆ ಎಂಬುದು

ಸ್ಥಳೀಯರ ಹಾಗೂ ಪಾಲಕರ ಅಭಿಪ್ರಾಯವಾಗಿದೆ ನಮ್ಮ ಸಿಹಿ ಕಹಿ ಪತ್ರಿಕೆಯ ವರದಿ ಕಂಡ ಮೇಲಾದರೂ ಈ ಸಮಸ್ಯೆ ಪರಿಹಾರವಾಗಿ ವಿದ್ಯಾರ್ಥಿಗಳ ಭವಿಷ್ಯತ್ತಿಗೆ ಒಳಿತಾಗುವುದೋ? ಕಾಯ್ದು ನೋಡೋಣ.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎನ್.ಎಸ್.ವಿ ಸಂಕನಗೌಡ್ರ.ರೋಣ. ಗದಗ**

## ಡಿ.ದೇವರಾಜ ಅರಸು ರವರು ಸಾಮಾಜಿಕ ಕಳಕಳಿ ಬದ್ಧತೆ ಇದ್ದಂತವರು – ಮುಖ್ಯಮಂತ್ರಿ ಸಿದ್ದರಾಮಯ್ಯ



**ಸಿಹಿ ಕಹಿ ಸುದ್ದಿ,**
**ಬೆಂಗಳೂರು :** ಉಳ್ಳುವವನೇ ಭೂಮಿಯ ಒಡೆ–ಯ ಕಾಯ್ದೆಯನ್ನು ಜಾರಿಗೆ ತಂದವರು ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ರವರು ಎಂದು ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯರವರುಹೇಳಿದರು. ಅವರು ಇಂದು ವಿಧಾನ ಸೌಧದ ಬ್ಯಾಂಕಟ್ ಹಾಲ್ ನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಏರ್ಪಡಿಸಿದ್ದ, ಡಿ.ದೇವರಾಜ ಅರಸು ಅವರ 110ನೇ ಜನ್ಮ ದಿನಾಚರಣೆ ಹಾಗೂ ಡಿ ದೇವರಾಜ ಅರಸು ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಅರಸು ರವರು ಪ್ರಗತಿಪರ ಸಾಧನಗಳ ಸರದಾರರಾಗಿದ್ದಾರೆ, ಸಾಮಾಜಿಕ ಪರಿವರ್ತನೆಯ ಹರಿಕಾರರು ಆಗಿದ್ದಾರೆ, ಡಾ, ಎಲ್.ಜಿ ಹಾವನೂರ್ ವರದಿಯಂತೆ ಮೀಸಲಾತಿಯನ್ನು ಜಾರಿಗೆ ತಂದರು.

ಬಾಬಾ ಸಾಹೇಬ್ ಅಂಬೇಡ್ಕರ್ ಅವರು 1959 ನವೆಂಬರ್ 24 ರಂದು ಸಂವಿಧಾನ ಬದ್ಧವಾಗಿ ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿದರು ಮೂಲಭೂತ ಹಕ್ಕುಗಳನ್ನು ಜಾರಿಗೆ ತಂದರು. ಬಸವಣ್ಣ ರವರು ಜಾತಿ ಪದ್ಧತಿ ವಿರುದ್ಧ ಹೋರಾಟ ಮಾಡಿದ್ದಾರೆ. ಅವರ ನಂತರ ಅರಸು ರವರು ಸಾಮಾಜಿಕ ಕಳಕಳಿ ಬದ್ಧತೆ ಯೊಂದಿಗೆ ಸರ್ಕಾರವನ್ನು ನಡೆಸಿದ್ದಾರೆ ಎಂದು ಹೇಳಿದರು. ವೇದಿಕೆಯಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳಾದ ಡಿ.ಕೆ ಶಿವಕುಮಾರ್, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾದ ಶಿವರಾಜ್.ಎಸ್ ತಂಗಡಗಿ, ಸಭಾಧ್ಯಕ್ಷ ಯು.ಟಿ ಖಾದರ್, ಸಭಾಪತಿ ಬಸವರಾಜ್ ಹೊರಟ್ಟಿ, ಸಚಿವರುಗಳಾದ ರಾಮಲಿಂಗ ರೆಡ್ಡಿ, ದಿನೇಶ್ ಗುಂಡೂರಾವ್, ಜಮೀರ್ ಅಹ್ಮದ್, ಕೆ.ಜೆ ಜಾರ್ಜ್, ಕೃಷ್ಣಬೈರೇಗೌಡ, ಬೈರತಿ ಸುರೇಶ್ ಹಾಗೂ ವಿರೋಧ ಪಕ್ಷದ ನಾಯಕರು ಉಪಸ್ಥಿತರಿದ್ದು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಿವಾಜಿ ನಗರ ವಿಧಾನ ಸಭಾ ಕ್ಷೇತ್ರದ ಶಾಸಕರಾದ ರಿಜ್ವಾನ್ ಅಹಮದ್ ರವರು ವಹಿಸಿದ್ದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎನ್. ವೆಂಕಟೇಶ್.ತರೀಕೆರೆ. ಚಿಕ್ಕಮಗಳೂರು**

## ಸಾವಳಗಿ ಶ್ರೀ ಶಿವಲಿಂಗೇಶ್ವರ ಜಾತ್ರಾ ಮಹೋತ್ಸವ 160 ಮುತ್ತೈದಿಯರ – ಉಡಿ ತುಂಬವ ಕಾರ್ಯಕ್ರಮ



**ಸಿಹಿ ಕಹಿ ಸುದ್ದಿ,**
**ಆಲಮೇಲ:**ಆಲಮೇಲಪಟ್ಟಣದಲ್ಲಿ ಶ್ರಾವಣ ಮಾಸದ ಅಂಗವಾಗಿ ಶ್ರೀ ಸಾವಳಗಿ ಶಿವಲಿಂಗೇಶ್ವರ ಜಾತ್ರಾ ಮಹೋತ್ಸವ ಶ್ರೀ ಗುಡ್ಡಾಪುರದ ಮಹಾ ಶಿವಶರಣೆ ಶ್ರೀ ದಾನಮ್ಮ ದೇವಿಯ ಪುರಾಣವನ್ನು ಆಲಮೇಲದ ವಿರಕ್ತ ಮಠದ ಶ್ರೀ ಮ.ನಿ.ಪ್ರ ಮಲ್ಲಿಭೋಮ್ಮ ಸ್ವಾಮೀಜಿ ಇವರ ಅಮೃತವಾಣಿ ಯಿಂದ ಹಾಗು ಈರಣ್ಣ ಕಲಶಟ್ಟಿ ತಂಡದವರಿಂದ ಸಂಗೀತ ಸೇವೆ ಸಲ್ಲಿಸಿದರು 11 ದಿನಗಳ ವರೆಗೆ ಶಿವಲಿಂಗೇಶ್ವರ ಮಠದ ಪ್ರಧಾನ ಆರ್ಚಕರಾದ ಶ್ರೀ . ಚೆನ್ನಯ್ಯ ಸ್ವಾಮೀ ಸಾರಂಗಮಠ ಇವರ ನೇತೃತ್ವದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮ ಸಾಗಿ ಬಂದವು ಶ್ರೀ ದಾನಮ್ಮದೇವಿಯಪುರಾಣವನ್ನು ದಿನಾಂಕ 21.8.2025 ವರೆಗೆ ನಡೆಯುವುದು ಇಂದು ಶ್ರೀ ಗುಡ್ಡಾಪುರದ ದಾನಮ್ಮ ದೇವಿ ಪುರಾಣದ ನಿಮಿತ್ತವಾಗಿ 160 ಮುತ್ತೈದೆಯರಿಗೆಉಡಿತುಂಬುವೆ ಕಾರ್ಯಕ್ರಮದಲ್ಲಿ ಶಿವ ಭಕ್ತರಾದ ಶೋಭಾ ರಸ್ತಾಪುರಮಠ ಗೀತಾ ಒಣಕುದರಿ ಭಾಗ್ಯ ಜ್ಯೋತಿ ಸಾರಂಗಮಠ ಅಕ್ಕಮಹಾದೇವಿ ಕುರಬತಹಳ್ಳಿ ಈರಮ್ಮ ಮಠ ಶೋಭಾ ಅಫಜಲಪುರ ಕಾರ್ಯಕ್ರಮವನ್ನು ಜಿಟಿ ಜಿಟಿ ಮಳೆರಾಯ ಸುರಿಯುತ್ತಿದ್ದರು ಸಂಭ್ರಮ ದಿಂದ ನೆರವೇರಿಸಿದರು ಶಿವ ಭಕ್ತರಾದ ಲಕ್ಮಣ ದತ್ತು ಆಲೋಣಿ ಪರಿವಾರ ಮುತ್ತೈದಿ ಮಹಿಳೆಯರಿಗೆ ಉಡಿ ತುಂಬುವ ಕಾರ್ಯಕ್ರಮದಲ್ಲಿ ದಂಡಿ ಹುಮಾಲೆ ಉಡಿಕಿ ಸಾಮಗ್ರಿಗಳು ಕರಿಗಡುಬ ತುಪ್ಪ ಹಾಗು ನಾನ ತರಹದ ಪ್ರಸಾದ ವ್ಯವಸ್ಥೆ ಏರ್ಪಡಿಸಿದರು. ಸರ್ವರ ಭಕ್ತರಾದ ಲಕ್ಷ್ಮಿಬಾಯಿ ಕುಂಬಾರ ಸುಮಿತ್ರಾ ಕುಂಬಾರ ಶ್ರೀದೇವಿ ಹಳಿಮನಿ ಸುವರ್ಣ ಮಠ ಸೇವೆ ಸಲ್ಲಿಸಿದ್ದರು.

ಕಾರ್ಯಕ್ರಮದಲ್ಲಿಗುರುಕುಂಬಾರ ವಿದ್ಯಾಧರ ರಸ್ತಾಪುರಮಠ ಗೋಲ್ಲಾಳ ಉಪ್ಪಿನ ದತ್ತು ಆಲೋಣಿ ಆರ್ಚಕರಾದ ಚೆನ್ನಯ್ಯ ಸಾರಂಗ ಮಠ ಲಕ್ಮಣ ಆಲೋಣಿ ಶಂಕರ ಹಳಿಮನಿ ರಮೇಶ ಅಫಜಲಪುರ ಸಾಗರ ಆಲೋಣಿ ಸೋಮಶೇಖರ ಮಠ ಪ.ಪಂ ಸದಸ್ಯರಾದ ಚಂದು ಹಳಿಮನಿ ಗುಣಾದಾರ ಒಣಕುದರಿ ಅಂಭೋಜಿ ಆಲೋಣಿ ಗುರು ಕಲಶೆಟ್ಟಿ ಮಾಹಾಂತ ಹಳಿಮನಿ ಹಂಪಣ್ಣ ಹಡಪದ ಆನೀಲ ಶಿಂದೆ ಸಂತೋಷ ಆಮರಗೊಂಡ ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ರೇವಣಸಿದ್ದಯ್ಯ.ಜಿ.ಹಿರೇಮಠ. ಅಲಮೇಲ**

## ಧಾರ್ಮಿಕ ವೃತಾಚರಣೆಗಳಿಂದ ಮಾನಸಿಕ ನೆಮ್ಮದಿ



**ರಬಕವಿ :** ಉಪವಾಸ, ವೃತಾಚರಣೆಗಳು ದೇಹ ಮತ್ತು ಮನಸ್ಸಿನಮೇಲೆಅಗಾಧಪರಿಣಾಮಬೀರುತ್ತವೆ.ದೈಹಿಕ ಪಚನಕ್ರಿಯೆ ಸುಧಾರಣೆ ಹಾಗೂ ಧಾರ್ಮಿಕತೆಯ ಹಿನ್ನೆಲೆಯಲ್ಲಿ ಮಾನಸಿಕ ಸಕ್ಷಮತೆಯನ್ನು ಕಠಿಣ ಆಚರಣೆಗಳು, ಸಂಕಷ್ಠಿಗಳಂಥ ವೃತಗಳು ವೃದ್ಧಿಸಿ ವೃತಾಚರಣೆಯ ಮಾನಸಿಕ ಮತ್ತು ದೈಹಿಕ ಬಲ ನೀಡುತ್ತವೆಂದು ಬಣಜಿಗ ಸಮಾಜದ ಹಿರಿಯ ಚಂದ್ರಶೇಖರ ಹುಲಗಬಾಳಿ ಹೇಳಿದರು.

ರಬಕವಿಯ ಗಣೇಶ ದೇಗುಲದಲ್ಲಿ ನಡೆದ ಪ್ರಸಾದ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಹುಲಗಬಾಳಿಧಾರ್ಮಿಕಸ್ಥಳಗಳಲ್ಲಿ,ವೃತಾಚರಣೆಯಲ್ಲಿ ನಡೆಸುವ ಅನ್ನದಾಸೋಹ ಜನ್ಮಾಂತರದ ಪುಣ್ಯಕ್ಕೆ ಮಾರ್ಗವೆಂದರು.

ದಾಸೋಹಕ್ಕೆ ಚಾಲನೆ ನೀಡಿ ಮಾತನಾಡಿದ ಪತ್ರಕರ್ತ ಶಿವಾನಂದ ಮಹಾಬಲಶೆಟ್ಟಿ ಕಾಯಕದಿಂದ ಆರ್ಜಿತ ಹಣದಲ್ಲಿ ಅನ್ನದಾಸೋಹ ನಡೆಸುವ ಪರಂಪರೆ ಶರಣ ಸಂಸ್ಕೃತಿಯ ಮುಖ್ಯ ಜೀವಾಳವಾಗಿದೆ. ಅಂಗಾರಕ ಸಂಕಷ್ಠಿಯಂದು ಗಣೇಶ ದೇಗುಲದಲ್ಲಿ ಸಂಕಷ್ಠಿ ನಿರತ ಭಕ್ತರು ಸಂಜೆ ಗಣೇಶ ದರ್ಶನದ ಬಳಿಕ ಸ್ವೀಕ–ರಿಸುವ ಪ್ರಸಾದಕ್ಕೆ ಮಹತ್ವವಿದೆ. ಕಾಯಕದಿಂದ ಬಂದ ಆದಾಯದಲ್ಲಿ ಅನ್ನದಾಸೋಹ ನಡೆಸುವ ಉದ್ಯಮಿ ಸೋಮಶೇಖರ ದುಂಡಪ್ಪ ಕೊಟ್ರಶೆಟ್ಟಿ ಯಾವುದೇ ಪ್ರತಿಫಲಾಪೇಕ್ಷೆ ರಹಿತ ನಿಷ್ಕಲ್ಮಶ ಮನಸ್ಸಿನಿಂದ ನಡೆಸುವ ದಾಸೋಹ ಪರಿಪಾಠ ಎಲ್ಲರಿಗೂ ಮಾದ–ರಿಯಾಗಲಿ ಎಂದರು.

ಈಸಂದರ್ಭದಲ್ಲಿಉದ್ಯಮಿಸೋಮಶೇಖರದುಂಡಪ್ಪ ಕೊಟ್ರಶೆಟ್ಟಿ, ಈರಣ್ಣಾ ಮಹಾಬಲಶೆಟ್ಟಿ, ಡಾ. ಜಿ. ಎಚ್. ಚಿತ್ತರಗಿ, ವಜ್ರಕಾಂತ ಕಮತಗಿ, ವಿಜಯಕುಮಾರ ಹಲಕುರ್ಕಿ, ಗಜಾನನ ತೆಗ್ಗಿ, ಎಂ. ಎಸ್. ಗಡೆನ್ನವರ, ಮಹಾದೇವಯ್ಯಾ ನಂದಯ್ಯಗೋಳ, ಸಂಗಮೇಶ ಗುಣಕಿ ಸೇರಿದಂತೆ ಬಣಜಿಗ ಸಮಾಜದ ಪ್ರಮುಖರು ಭಾಗವಹಿಸಿದ್ದರು.

## ಶ್ರೀಕೃಷ್ಣ ಜನ್ಮಾಷ್ಟಮಿಯ ಪ್ರಯುಕ್ತ – ವಿಶೇಷ ಭಜನೆ ಮತ್ತು ಸತ್ಸಂಗ





**ಸಿಹಿ ಕಹಿ ಸುದ್ದಿ,**
**ಚಳ್ಳಕೆರೆ:**ನಗರದ ವಾಸವಿ ಕಾಲೋನಿಯ ಶ್ರೀಶಾರದಾಶ್ರಮದ ದೇವಸ್ಥಾನದಲ್ಲಿ "ಶ್ರೀಕೃಷ್ಣ ಜನ್ಮಾಷ್ಟಮಿ" ಯ ಪ್ರಯುಕ್ತ ಹೊಸಪೇಟೆಯ ಶ್ರೀರಾಮಕೃಷ್ಣ ಗೀತಾಶ್ರಮದ ಅಧ್ಯಕ್ಷರಾದ ಪೂಜ್ಯಸ್ವಾಮಿ ಸುಮೇಧಾನಂದಜೀ ಮಹಾರಾಜ್ ಅವರಿಂದ "ವಿಶೇಷ ಭಜನೆ ಮತ್ತು ಭಗವನ್ನಾಮ ಸಂಕೀರ್ತನಾ" ಕಾರ್ಯಕ್ರಮ ನಡೆದರೆ ಶ್ರೀಶಾರದಾಶ್ರಮದ ಅಧ್ಯಕ್ಷರಾದ ಪೂಜ್ಯ ಮಾತಾಜೀ ತ್ಯಾಗಮಯೀ ಅವರು ಸತ್ಸಂಗದ ದಿವ್ಯ ಸಾನಿಧ್ಯ ವಹಿಸಿ "ಶ್ರೀಕೃಷ್ಣನ ಮಹಾನ್ ಚಾರಿತ್ರ್ಯ, ನಂದ ಮಹೋತ್ಸವ ಮತ್ತು ಅವನ ಬಾಲ ಲೀಲೆಗಳ" ಬಗ್ಗೆ ವಿಶೇಷ ಪ್ರವಚನ ಕಾರ್ಯಕ್ರಮವನ್ನು ನಡೆಸಿ ಕೊಟ್ಟರು. ಮಾತಾಜೀ ತ್ಯಾಗಮಯೀ ಮಾತನಾಡಿ ಪರಮ ನಿರ್ವಿಕಾರ ಚಿತ್ತ ಶ್ರೀಕೃಷ್ಣನದು, ಅವನ ಬಾಲ ಲೀಲೆಗಳು ಮತ್ತು ನಂದ ಮಹೋತ್ಸವದ ಘಟನೆಗಳು ಆನಂದದಾಯಕವಾಗಿವೆ. ಅವನ ಅನೇಕ ಸದ್ಗುಣಗಳು ಇಂದಿನ ಜನರಿಗೆ ಮಾದರಿಯಾಗಿವೆ. "ಶ್ರೀಕೃಷ್ಣನ ವಿಚಾರಗಳನ್ನು ಒಳಗೊಂಡ ಶ್ರೀಮದ್ ಭಗವದ್ಗೀತೆ" ಮತ್ತು "ಶ್ರೀಮದ್ ಭಾಗವತ" ಸದ್ಗ್ರಂಥಗಳು ಸಾರ್ಥಕ ಜೀವನಕ್ಕೆ ಬೇಕಾದ ಹಲವಾರು ಉನ್ನತ ವಿಚಾರಗಳನ್ನು ತಿಳಿಸುವ ಮಹತ್ವದ ಪುಸ್ತಕಗಳು ಎಂದು ಬಣ್ಣಿಸಿದರು.

ಜನ್ಮಾಷ್ಟಮಿಯಸತ್ಸಂಗಕಾರ್ಯಕ್ರಮದಲ್ಲಿಶ್ರೀಶಾರದಾಶ್ರಮದ ಸದ್ಭಕ್ತರಾದ ಉದಯಕುಮಾರ್, ಬಸವರಾಜ್ ಎನ್, ಸುಮಾ ಪ್ರಕಾಶ್, ಹೂವಿನ ಲಕ್ಷ್ಮೀದೇವಮ್ಮ, ಶ್ರೀಮತಿ ಎಂ.ಗೀತಾ ನಾಗರಾಜ್, ಜಿ.ಯಶೋಧಾ ಪ್ರಕಾಶ್, ವನಜಾಕ್ಷಿ ಮೋಹನ್, ಯತೀಶ್ ಎಂ ಸಿದ್ದಾಪುರ, ಪಿ.ಎಸ್ ಮಾಣಿಕ್ಯ ಸತ್ಯನಾರಾಯಣ, ಕವಿತಾ ಗುರುಮೂರ್ತಿ, ವೆಂಕಟಲಕ್ಷ್ಮೀ, ಸರಸ್ವತಿ ಗೋವಿಂದರಾಜು, ಗೀತಾ ವೆಂಕಟೇಶರೆಡ್ಡಿ, ಸಿ.ಎಸ್ ಭಾರತಿ, ಕಾಲುವೆಹಳ್ಳಿ ಪಾಲಕ್ಕ, ಮಂಜುಳ, ಅಂಬುಜಾ ಶಾಂತಕುಮಾರ್, ಮಂಜುಳ ಉಮೇಶ್, ಲಕ್ಷ್ಮೀ ವೆಂಕಟಾಚಲಂ, ಡಾ, ಭೂಮಿಕ, ಸಂತೋಷ್, ಚೇತನ್, ಚೆನ್ನಕೇಶವ, ಲಕ್ಷ್ಮೀ, ಲತಾ ಭಕ್ತವತ್ಸಲ, ಪುಷ್ಪಲತಾ, ನಾಗರತ್ನಮ್ಮ, ಶಾರದಾಮ್ಮ, ರತ್ನಮ್ಮ ಚೆನ್ನಬಸಪ್ಪ, ಅಂಬಿಕಾ ಪರಮೇಶ್ವರ್, ಗೋವಿಂದಶೆಟ್ಟಿ, ಸುಮನಾ ಕೋಟೇಶ್ವರ, ಅನುಸೂಯ, ಕಾವೇರಿ, ರಶ್ಮಿ ವಸಂತ, ಯಶಸ್ವಿ ಸೇರಿದಂತೆ ಸಾಕಷ್ಟು ಸಂಖ್ಯೆಯ ಸದ್ಭಕ್ತರು ಭಾಗವಹಿಸಿದ್ದರು .

**ವರದಿ–ಯತೀಶ್ ಎಂ ಸಿದ್ದಾಪುರ, ಚಳ್ಳಕೆರೆ.**

## ಡಿಸಿಸಿ ಬ್ಯಾಂಕ್ ಚುನಾವಣೆಗೆ ತಾಲೀಮ ಶುರು; ಪ್ರಕಾಶ ತಪಶೆಟ್ಟಿ ಭೇಟಿ



**ತೇರದಾಳ:**ಬರಲಿರುವ ನವಂಬರ ತಿಂಗಳಲ್ಲಿ ಬಾಗಲಕೋಟೆ ಜಿಲ್ಲಾ ಸಹಕಾರಿ ಬ್ಯಾಂಕ್ ಆಡಳಿತ ಮಂಡಳಿಯ ಚುನಾವಣೆ ನಡೆಯಲಿದ್ದು, ಆಕಾಂಕ್ಷಿಗಳು ಈಗಲೇ ತಾಲೀಮ ಶುರು ಮಾಡಿದ್ದಾರೆ.

ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಪ್ರಕಾಶ ತಪಶೆಟ್ಟಿ ಗುರುವಾರ ತೇರದಾಳ ಭಾಗಕ್ಕೆ ಆಗಮಿಸಿ ತಾವು ಸ್ಪರ್ಧಿಸುವ ಕೃಷಿಯೇತರ ಪತ್ತಿನ ಸಹಕಾರಿ ಸಂಘಗಳಿಗೆ ಭೇಟಿ ನೀಡಿ ಬ್ಯಾಂಕ್ ಆಡಳಿತ ಮಂಡಳಿ ಜತೆಗೆ ಚರ್ಚಿಸಿದರು.

ಈ ಸಂದರ್ಭದಲ್ಲಿ ಸ ು ದ್ದಿ ಗಾ ರ ರ ೊ ಂ ದಿ ಗ ೆ ಮಾತನಾಡಿದ ಪ್ರಕಾಶ ತಪಶೆಟ್ಟಿ, ಐದು ವರ್ಷಗಳಲ್ಲಿ 187 ನೂತನ ಕೃಷಿಯೇತರ ಪತ್ತಿನ ಸಹಕಾರಿ ಸಂಘಗಳಾಗಿದ್ದು, ಜಿಲ್ಲೆಯಲ್ಲಿ ಒಟ್ಟು 487 ತಾವು ಪ್ರತಿನಿಧಿಸುವ ಕ್ಷೇತ್ರಕ್ಕೆ ಬ್ಯಾಂಕುಗಳಿವೆ.

ಮೂರು ಬಾರಿ ಬಿಡಿಸಿಸಿ ಬ್ಯಾಂಕ್ ಚುನಾವಣೆ ಎದುರಿಸಿದ್ದು, ಈ ಬಾರಿಯೂ ಸ್ಪರ್ಧಿಸುವುದಾಗಿ ತಿಳಿಸಿದ ಅವರು,

ಕೃಷಿಯೇತರ ಪತ್ತಿನ ಸಹಕಾರಿ ಸಂಘಗಳು ಡಿಸಿಸಿ ಬ್ಯಾಂಕಿನಲ್ಲಿ ಇಡುವ ಠೇವಣಿ, ಸಭೆಗಳಲ್ಲಿ ಭಾಗವಹಿಸುವ ಕಡ್ಡಾಯವಿಕೆ, ಕಟ್ಟಡ ಹಾಗೂ ಶುದ್ಧ ಕುಡಿಯುವ ನೀರಿನ ಘಟಕಗಳಿಗೆ ನೀಡುವ ಸಹಾಯ ಧನ ಸೇ–ರಿದಂತೆ ತಮ್ಮ ಕ್ಷೇತ್ರ ವ್ಯಾಪ್ತಿಯ ಬ್ಯಾಂಕುಗಳ ಬೇಡಿಕೆಗಳನ್ನು ಈಡೇರಿಸುವ ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ. ಇನ್ನೂ ಸಾಕಷ್ಟು ಹೊಸ ವಿಚಾರಗಳನ್ನು ಹೊಂದಲಾಗಿದೆ. ತಮ್ಮ ಕ್ಷೇತ್ರ ವ್ಯಾಪ್ತಿಯ ಬ್ಯಾಂಕುಗಳ ಸಹಕಾರ ಕೂಡ ಬಹಳಷ್ಟು ಅಮೂಲ್ಯವಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಉಸ್ಮಾನ ಮುಜಾವರ, ಡಾ. ಶಂಕರ ಅಥಣಿ, ಪ್ರವೀಣ ಬಾಳಿಗೇರಿ, ರಮೇಶ ಪಟ್ಟಣಶೆಟ್ಟಿ, ಶ್ರೀನಾಥ ಸೊಟ್ಟಿ, ಶ್ರೀಶೈಲ ತೆಳಗಿನಮನಿ, ಸುರೇಶ ಮರಡಿ, ಈಶ್ವರ ಮಠಪತಿ ಹಾಜರಿದ್ದರು.

# 1219 ದಿನ ಪೂರೈಸಿದ ತಾಲ್ಲೂಕು ಬೇಡಿಕೆ ಹೋರಾಟ: ಬಾರಕೋಲ ಚಳುವಳಿ ಯಶಸ್ವಿ

**ಮಹಾಲಿಂಗಪುರ :** ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸಲು ಒತ್ತಾಯಿಸಿ ಪಟ್ಟಣದ ಚನ್ನಮ್ಮ ವೃತ್ತದಲ್ಲಿ ನಡೆಯುತ್ತಿರುವ ಹೋರಾಟವು ಆಗಸ್ಟ್ 13 ರಂದು 1,219 ದಿನಗಳನ್ನು ಪೂರೈಸಿದೆ.





**ಬಾರಕೋಲ ಚಳುವಳಿ ಯಶಸ್ವಿ :**
ತಾಲ್ಲೂಕು ರಚನೆಗಾಗಿ ಒತ್ತಾಯಿಸಿ ತಾಲ್ಲೂಕು ಹೋರಾಟ ಸಮಿತಿಯಿಂದ ಬುಧವಾರ ಹಮ್ಮಿಕೊಂಡಿದ್ದ ರೈತರ ಎತ್ತಿನ ಚಕ್ಕಡಿಗಳ ಮೂಲಕ ಹಮ್ಮಿಕೊಂಡಿದ್ದ ಬಾರಕೋಲ ಚಳುವಳಿ ಸಂಪೂರ್ಣ ಯಶಸ್ವಿಯಾಯಿತು. ಚಳುವಳಿ ಹಿನ್ನೆಲೆಯಲ್ಲಿ ಬುಧವಾರ ಮಧ್ಯಾಹ್ನ 12 ರವರೆಗೆ ಪಟ್ಟಣದ ಎಲ್ಲಾ ಅಂಗಡಿಗಳ ಪ್ಯಾಪಾರಸ್ಥರು ಸಂಪೂರ್ಣ ಬಂದ್ ಮಾಡಿ ಹೋರಾಟಕ್ಕೆ ಬೆಂಬಲ ಸೂಚಿಸಿದರು. ಚಳುವಳಿಯ ಸಮಯದಲ್ಲಿ ಪಟ್ಟಣದಲ್ಲಿ ಬಸ್ ಸಂಚಾರ ಸಂಪೂರ್ಣ ನಿಷೇಧಿಸಲಾಗಿತ್ತು.

ಮಹಾಲಿಂಗಪುರ ಹಾಗೂ ಸುತ್ತಮುತ್ತಲಿನ ಹಲವು ಗ್ರಾಮಗಳಿಂದ ರೈತರು ಚಕ್ಕಡಿ ಬಂಡಿಂ–ಬೊಂದಿಗೆ ಬಾರಕೋಲ ಚಳುವಳಿಯಲ್ಲಿ ಬಾಗವಹಿಸಿದ್ದರು. ಎಪಿಎಂಸಿ ಗಣಪತಿ ದೇವಸ್ಥಾನದಿಂದ ಬಸವ ವೃತ್ತ, ಡಬಲ್ ರಸ್ತೆ, ವಿವೇಕ ವೃತ್ತ, ನಡಚೌಕಿ, ಜವಳಿ ಬಜಾರ, ಗಾಂಧಿವೃತ್ತ, ಚನ್ನಮ್ಮ ಸರ್ಕಲ್ವರೆಗೆ ಚಕ್ಕಡಿ ಬಂಡಿಗಳ ಬೃಹತ್ ಮೆರವಣಿಗೆ ನಡೆಸಿ, ಚನ್ನಮ್ಮ ವೃತ್ತದಲ್ಲಿ ರಾಜ್ಯ ಹೆದ್ದಾರಿಯನ್ನು ಬಂದ್ ಮಾಡಿ ಪ್ರತಿಭಟಿಸಲಾಯಿತು.

**ಜಿಲ್ಲಾಧಿಕಾರಿಗಳ ಭೇಟಿ :**
ಚನ್ನಮ್ಮವೃತ್ತದಲ್ಲಿನಹೋರಾಟಸ್ಥಳಕ್ಕೆಆಗಮಿಸಿದ ಬಾಗಲಕೋಟೆ ಜಿಲ್ಲಾಧಿಕಾರಿ ಎಂ. ಸಂಗಪ್ಪ ಅವರು ಆಗಮಿಸಿ ಮಹಾಲಿಂಗಪುರ ಪಟ್ಟಣವು ತಾಲ್ಲೂಕು ಕೇಂದ್ರವಾಗಲು ಯೋಗ್ಯವಾಗಿದೆ. ಜಿಲ್ಲಾಧಿಕಾರಿಗಳಿಂದ ಸರ್ಕಾರಕ್ಕೆ ಕಳಿಸಿದ ವರದಿಯು ಸೂಕ್ತವಾಗಿದೆ. ಶೀಘ್ರ ತಾಲ್ಲೂಕು ಘೋಷಿಸಬೇಕೆಂದು ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವರಾದ ಆರ್.ಬಿ.ತಿಮ್ಮಾಪೂರ ಅವರು ಕಂದಾಯ ಸಚಿವರಿಗೆ, ಮುಖ್ಯಮಂತ್ರಿ ಸಿದ್ದಾರಾಮಯ್ಯನವರಿಗೆ ಶಿಫಾರಸ್ಸು ಪತ್ರವನ್ನು ಕಳಿಸಿದ್ದಾರೆ. ನಿಮ್ಮ ಬೇಡಿಕೆ ನ್ಯಾಯಸಮ್ಮತ ಮತ್ತು ಸೂಕ್ತವಾಗಿದೆ. ನಿಮ್ಮ ಬೇಡಿಕೆಯ ಮನವಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಶಿಫಾರಸ್ಸು ಪತ್ರವು ಸರ್ಕಾರಕ್ಕೆ ತಲುಪಿದೆ ಎಂದು ಹೇಳಿದ ಅವರು ತಾಲ್ಲೂಕು ಹೋರಾಟಗಾರರಿಂದ ಮನವಿ ಸ್ವೀಕರಿಸಿ, ಸಚಿವರ ಶಿಫಾರಸು ಪತ್ರವನ್ನು ಹೋರಾಟ ಸಮಿತಿ ಅಧ್ಯಕ್ಷರಿಗೆ ನೀಡಿ, ಬಾರಕೋಲ ಚಳುವಳಿಯನ್ನು ಕೈ ಬಿಡಲು ವಿನಂತಿಸಿದರು.

ಮೂವತ್ತು ವರ್ಷಗಳ ಬೇಡಿಕೆ ಪೂರೈಸಲು ಒತ್ತಾಯ :
ತಾಲ್ಲೂಕು ಹೋರಾಟ ವೇದಿಕೆ ಅಧ್ಯಕ್ಷ ಸಂಗಪ್ಪ ಹಲ್ಲಿ, ಕಾರ್ಯಾಧ್ಯಕ್ಷ ಧರೆಪ್ಪ ಸಾಂಗ್ಲಿಕರ, ರೈತ ಸಂಘದ ಮುಖಂಡ ಗಂಗಾಧರ ಮೇಟಿ, ಹೋರಾಟ ಸಮಿತಿಯ ನಿಂಗಪ್ಪ ಬಾಳಿಕಾಯಿ, ಸೈದಾಪೂರ ಗ್ರಾಮ ಪಂಚಾಯತ್ ಅಧ್ಯಕ್ಷ ಮಹಾಲಿಂಗಪ್ಪ ಸನದಿ, ರಂಗನಗೌಡ ಪಾಟೀಲ ಮಾತನಾಡಿ, ಹೋರಾಟವು ಈಗಾಗಲೇ 1,219 ದಿನಗಳನ್ನು ಪೂರೈಸಿದ ಕಾರಣ ಕ್ಷೇತ್ರದ ಶಾಸಕರು, ಜಿಲ್ಲಾ ಉಸ್ತುವಾರಿ ಸಚಿವರು ಹೋರಾಟಗಾರರ ತಾಳ್ಮೆ ಪರೀಕ್ಷಿಸದೇ ಸರ್ಕಾರ ಮತ್ತು ಮುಖ್ಯಮಂತ್ರಿಗಳ ಮೇಲೆ ಒತ್ತಡ ತಂದು ಶೀಘ್ರವಾಗಿ ಮಹಾಲಿಂಗಪುರ ತಾಲ್ಲೂಕು ರಚನೆಗೆ ಕ್ರಮವಹಿಸಬೇಕು. ಬರುವ ಡಿಸೆಂಬರ್ 31 ರೊಳಗೆ ಹೊಸ ತಾಲ್ಲೂಕು ಮತ್ತು ಜಿಲ್ಲೆಗಳ ರಚನೆ ಪೂರ್ಣಗೊಳಿಸಲು ಕೇಂದ್ರ ಸರ್ಕಾರದ ನಿರ್ದೇಶನ ಇರುವುದರಿಂದ ಸರ್ಕಾರ ಶೀಘ್ರ ಮಹಾಲಿಂಗಪುರ ತಾಲ್ಲೂಕು ರಚನೆ ಮಾಡಬೇಕೆಂದು ಜನಪ್ರತಿನಿಧಿಗಳು ಮತ್ತು ಸರ್ಕಾರಕ್ಕೆ ಒತ್ತಾಯಿಸಿದರು.

**ಜವಾಬ್ದಾರಿ ಹೊತ್ತ ಕಾಂಗ್ರೆಸ್ ಮುಖಂಡರು :**
ಸೋಮವಾರದ ಹೋರಾಟ ವೇದಿಕೆಗೆ ಜಿಲ್ಲಾ ಉಸ್ತುವಾರಿ ಸಚಿವರು ಬಂದು ಮನವಿ ಸ್ವೀಕರಿಸಬೇಕು ಎಂಬುದು ಹೋರಾಟಗಾರರ ಬೇಡಿಕೆಯಾಗಿತ್ತು. ತೇರದಾಳ ಮತಕ್ಷೇತ್ರದ ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ, ಪುರಸಭೆ ಅಧ್ಯಕ್ಷ ಯಲ್ಲನಗೌಡ ಪಾಟೀಲ್, ಜಿಲ್ಲಾ ಕಿಸಾನ್ ಘಟಕದ ಜಿಲ್ಲಾಧ್ಯಕ್ಷ ಆನಂದ ಹಟ್ಟಿ, ಮುಖಂಡರಾದ ಡಾ. ಎ. ಆರ್. ಬೆಳಗಲಿ, ಮಧಬಾಂವಿ ಗ್ರಾಮದ ಕಾಂಗ್ರೆಸ್ ಮುಖಂಡ ಮಹ್ಮದ ಹೂಲಿಕಟ್ಟಿ ಅವರು ಜಿಲ್ಲಾ ಉಸ್ತುವಾರಿ ಸಚಿವ ಆರ್. ಬಿ. ತಿಮ್ಮಾಪೂರ ಅವರ ಮೂಲಕ ಸಿ.ಎಂ. ಅವರ ಭೇಟಿ ಸಮಯವನ್ನು ನಿಗದಿಪಡಿಸಿಕೊಂಡು, ಪ್ರಸಕ್ತ ಅಧಿವೇಶನ ಮುಗಿಯುವುದರೊಳಗೆ ತಾಲ್ಲೂಕು ಹೋರಾಟದ ನಿಯೋಗವನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿ, ಮುಖ್ಯಮಂತ್ರಿಗಳನ್ನು ಭೇಟಿ ಮಾಡಿಸುವ ಜವಾಬ್ದಾರಿಯನ್ನು ಹೊತ್ತ ಕಾರಣ ತಾಲ್ಲೂಕು ಹೋರಾಟಗಾರರು ಬಾರಕೋಲ ಚಳುವಳಿಯನ್ನು ಹಿಂಪಡೆದರು.

**ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಕೆ :**
ಬಾಗಲಕೋಟೆ ಜಿಲ್ಲಾಧಿಕಾರಿ ಸಂಗಪ್ಪ ಎಂ. ಅವರ ಮೂಲಕ ಜಿಲ್ಲಾಧಿಕಾರಿಗಳು ಮತ್ತು ಕಂದಾಯ ಸಚಿವರಿಗೆ, ಜಿಲ್ಲಾ ಉಸ್ತುವಾರಿ ಸಚಿವರಿಗೆ ಮನವಿ ಸಲ್ಲಿಸಲಾಯಿತು. ಬಾಗಲಕೋಟೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಹೆಚ್ಚುವರಿ ಎಸ್.ಪಿ. ಮಹಾಂತೇಶ ಜಿದ್ದಿ, ಜಮಖಂಡಿಂ–ಋ ಕಂದಾಯ ಉಪವಿಭಾಗಾಧಿಕಾರಿ ಶ್ವೇತಾ ಬೀಡಿಕರ್, ಜಮಖಂಡಿ ಡಿವೈಎಸ್ಪಿ ಜಮೀರ ಎಸ್. ರೋಷನ್, ರಬಕವಿ–ಬನಹಟ್ಟಿ ತಹಶೀಲ್ದಾರ ಗಿರೀಶ ಸ್ವಾದಿ, ಸಿಪಿಆಯ್ ಸಂಜೀವ ಬಳಗಾರ, ಬನಹಟ್ಟಿ ಪಿಎಸ್ಆಯ್ ಶಾಂತಾ ಹಳ್ಳಿ, ಮಹಾಲಿಂಗಪುರ ಎಸ್ಸೈಗಳಾದ ಕಿರಣ ಸತ್ತಿಗೇರಿ, ಮಧು ಎಲ್. ಸೇರಿದಂತೆ ಹಲವು ಅಧಿಕಾರಿಗಳು ಇದ್ದರು.

**ಸೂಕ್ತ ಬಂದೋಬಸ್ತ್ :**
ಜಮಖಂಡಿ ಡಿವೈಎಸ್ಪಿ ಎಸ್. ರೋಷನ್ ಜಮೀರ, ರಬಕವಿ–ಬನಹಟ್ಟಿ ಸಿಪಿಆಯ್ ಸಂಜೀವ ಬಳಗಾರ ನೇತೃತ್ವದಲ್ಲಿ ಒಂದು ಡಿಆರ್ ತುಕಡಿ, ಮುಧೋಳ, ಲೋಕಾಪುರ, ತೇರದಾಳ, ಬನಹಟ್ಟಿ ಹಾಗೂ ಸ್ಥಳೀಯ ಪಿ.ಎಸ್.ಐ. ಸೇರಿದಂತೆ ನೂರಕ್ಕೂ ಅಧಿಕ ಪೊಲೀಸ್ ಸಿಬ್ಬಂದಿ ಸೂಕ್ತ ಬಂದೋಬಸ್ತ್ ಒದಗಿಸಿದ್ದರು.

**ಆಗಸ್ಟ 19 ರಂದು ನಿಯೋಗ ಬೆಂಗಳೂರಿಗೆ:**
ಆ. 19 ರಂದು ತಾಲ್ಲೂಕು ಹೋರಾಟ ನಿಯೋಗವನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಲಾಗುವದು.

ಆಗಸ್ಟ 20 ಅಥವಾ 21 ರಂದು ತಾಲ್ಲೂಕು ಹೋರಾಟ ನಿಯೋಗವು ಸಿ.ಎಂ. ಸಿದ್ದರಾಮಯ್ಯನವರ ಭೇಟಿಗೆ ದಿನಾಂಕ ನಿಗದಿ ಪಡಿಸಲು ಜಿಲ್ಲಾ ಉಸ್ತುವಾರಿ ಸಚಿವರಿಗೆ ತಿಳಿಸಲಾಗಿದೆ ಎಂದು ಪುರಸಭೆ ಅಧ್ಯಕ್ಷ ಯಲ್ಲನಗೌಡ ಪಾಟೀಲ ಅವರು ತಿಳಿಸಿದ್ದಾರೆ.

ಬಾರಕೋಲ ಚಳುವಳಿಯಲ್ಲಿ ಮಹಾದೇವ ಮಾರಾಪೂರ, ಶಿವನಗೌಡ ಪಾಟೀಲ, ಮಹಾಲಿಂಗಪ್ಪ ಅವರಾದಿ, ದುಂಡಪ್ಪ ಇಟ್ನಾಳ, ರಫಿಕ್ ಮಾಲದಾರ, ಸಿದ್ದು ಶಿರೋಳ, ಈಶ್ವರ ಮುರಗೋಡ, ಸುಭಾಸ ಶಿರಬೂರ, ಸಿದ್ದುಗೌಡ ಪಾಟೀಲ, ಸಂಜು ಬಾರಕೋಲ, ಶಿವಲಿಂಗ ಟರ್ಕಿ, ವೀರೇಶ ಆಸಂಗಿ, ಮಲ್ಲಪ್ಪ ಭಾವಿಕಟ್ಟಿ, ಶಂಕರಗೌಡ ಪಾಟೀಲ, ಈರಪ್ಪ ದಿನ್ನಿಮನಿ, ದುಂಡಪ್ಪ ಜಾಧವ, ಭೀಮಸಿ ಸಸಾಲಟ್ಟಿ, ಮಾರುತಿ ಖರೋಶಿ, ಈರಣ್ಣ ಹಲಗತ್ತಿ, ಮುಸ್ತಾಕ ಚಿಕ್ಕೋಡಿ,
ಚನ್ನಪ್ಪ ಪಟ್ಟಣಶೆಟ್ಟಿ, ಸಿದ್ದು ಬೆನ್ನೂರ, ಎಸ್. ಬಿ. ಅಂಗಡಿ, ನ್ಯಾಯವಾದಿ ಮಲ್ಲು ಸಂಗನ್ನವರ ಸೇರಿದಂತೆ ಮಹಾಲಿಂಗಪುರ ಪಟ್ಟಣ ಹಾಗೂ ತಾಲ್ಲೂಕು ವ್ಯಾಪ್ತಿಯ ಹದಿನಾರು ಗ್ರಾಮಗಳ ರೈತರು, ಮುಖಂಡರು, ಜನಪ್ರತಿನಿಧಿಗಳು, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಸೇರಿದಂತೆ ಪಕ್ಷಾತೀತವಾಗಿ, ಜಾತ್ಯಾತೀತವಾಗಿ ನೂರಾರು ಜನರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

**ಹಳ್ಳಿಗಳನ್ನು ಬಿಟ್ಟು ಕೊಡಲು ಒಪ್ಪಿದ ಸಚಿವರು :**
ನಿಯೋಜಿತ ಮಹಾಲಿಂಗಪುರ ತಾಲ್ಲೂಕಿನಲ್ಲಿ ಮುಧೋಳ ತಾಲ್ಲೂಕು ವ್ಯಾಪ್ತಿಯಲ್ಲಿಯ ರನ್ನಬೆಳಗಲಿ ಪಟ್ಟಣ, ನಾಗರಾಳ, ಅಕ್ಕಿಮರಡಿ, ಮಿರ್ಜಿ, ಮಲ್ಲಾಪೂರ ಪಿ. ಜಿ. ಗ್ರಾಮಗಳನ್ನು ಬಿಟ್ಟುಕೊಡಲು ಒಪ್ಪಿಗೆ ಸೂಚಿಸಿ, ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಸಲ್ಲಿಸಿದ್ದು ಮಹಾಲಿಂಗಪುರ ತಾಲ್ಲೂಕು ವರದಿ ಸೂಕ್ತವಿದೆ. ಶೀಘ್ರ ಮಹಾಲಿಂಗಪುರ ತಾಲ್ಲೂಕು ಘೋಷಿಸಬೇಕೆಂದು ಒತ್ತಾಯಿಸಿ ಸರ್ಕಾರಕ್ಕೆ ಶಿಫಾರಸ್ಸು ಪತ್ರವನ್ನು ನೀಡಿದ್ದು ನಮ್ಮ ಬಾರಕೋಲ ಚಳುವಳಿ ಹೋರಾಟಕ್ಕೆ ಸಿಕ್ಕ ಸ್ಪಂದನೆಯಾಗಿದೆ ಎಂದು ತಾಲ್ಲೂಕು ಹೋರಾಟಗಾರರು ಜಿಲ್ಲಾ ಉಸ್ತುವಾರಿ ಸಚಿವ ಆರ್. ಬಿ. ತಿಮ್ಮಾಪೂರ ಅವರನ್ನು ಅಭಿನಂದಿಸಿದ್ದಾರೆ.

---

## ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟದ ಜಿಲ್ಲಾ ಕಾರ್ಯದರ್ಶಿಯಾಗಿ ವೆಂಕಣ್ಣ ನೇಮಕ

**ಜಮಖಂಡಿ :** ಭಾರತೀಯ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟ (ಎನ್.ಎಸ್.ಯು.ಟಿ) ಜಿಲ್ಲಾ ಘಟಕದ ಕಾರ್ಯದರ್ಶಿಯಾಗಿ ಯಂಕಣ್ಣ ದುಂಡಪ್ಪ ಬಬಲಾದಿ ಅವರನ್ನು ನೇಮಕ ಮಾಡಲಾಗಿದೆ ಎಂದು ಜಿಲ್ಲಾಧ್ಯಕ್ಷ ವಿಜಯಕುಮಾರ ತಿಪರಡ್ಡಿ ತಿಳಿಸಿದ್ದಾರೆ.

## ಕಾಣೆಯಾದವರ ಪ್ರಕಟಣೆ

**ಬಾಗಲಕೋಟೆ :** ಬಾಗಲಕೋಟೆಯ ಹಳಪೇಟ ಓಣಿಯ ಮನೆಯಿಂದ ಗಿರಿಸಾಗರಕ್ಕೆ ಹೋಗುತ್ತೇನೆ ಎಂದು ಹೇಳಿದ ವೀರುಪಾಕ್ಷಿ ಮಹಾದೇವಪ್ಪ ಎಳೆಮ್ಮಿ ಕಾಣೆಯಾಗಿದ್ದಾರೆ. ವಯಸ್ಸು 35, ಒಕ್ಕಲುತನ ಉದ್ಯೋಗ ಮಾಡುತ್ತಿದ್ದು, 5.3 ಅಡಿ ಎತ್ತರ, ದುಂಡು ಮುಖ, ತಲೆಯ ಮೇಲೆ ಸ್ವಲ್ಪ ಕೂದಲು ಹೋಗಿದ್ದು, ಕನ್ನಡ ಭಾಷೆ ಮಾತನಾಡುತ್ತಾರೆ. ಬೂದಿ ಬಣ್ಣದ ಪ್ಯಾಂಟ್ ಮತ್ತು ನೀಲಿ ಶರ್ಟ್ ಧರಿಸಿದ್ದರು. ಇತನ ಬಗ್ಗೆ ಮಾಹಿತಿ ದೊರೆತಲ್ಲಿ ಬಾಗಲಕೋಟೆ ಶಹರ ಪೊಲೀಸ್ ಠಾಣೆಗೆ ನೀಡುವಂತೆ ಸಹಾಯಕ ಪೊಲೀಸ್ ಸಬ್ ಇನ್ಸಪೆಕ್ಟರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಭಗವಂತನ ಸಾಕ್ಷಾತ್ಕಾರಕ್ಕೆ ಗುರು ಬೇಕು: ಪಂಚಕಟ್ಟಿಮಠ

**ಜಮಖಂಡಿ :** ಗುರು ಎಂದರೆ ಸರ್ವವ್ಯಾಪಕ. ಗುರು ಎಂದರೆ ನಿರಾಕಾರ. ಭಗವಂತನ ಕಡೆಗೆ ಹೋಗುವ ದಾರಿಯನ್ನು ತೋರುವಾತ ಗುರು. ಭಗವಂತನ ಸಾಕ್ಷಾತ್ಕಾರವಾಗಲು ಗುರು ಬೇಕು. ಗುರುಗಳಲ್ಲಿ ಭಗವಂತನನ್ನು ಕಾಣಬೇಕು ಎಂದು ಬಿಆರ್ಪಿ ದಾನಮ್ಮ ಪಂಚಕಟ್ಟಿಮಠ ಹೇಳಿದರು.



ಶ್ರಾವಣ ಮಾಸದ ನಿಮಿತ್ಯ ಓಲೆಮಠದ ಆಶ್ರಯದಲ್ಲಿ ಜರುಗುತ್ತಿರುವ ಓಣಿಗೊಂದು ದಿನ ವಚನ ಶ್ರಾವಣ ಅಂಗವಾಗಿ ಕಾಡಸಿದ್ಧೇಶ್ವರ ಮಂಗಲ ಕಾರ್ಯಾಲಯದಲ್ಲಿ ಬುಧವಾರ ಸಂಜೆ ನಡೆದ ಇಪ್ಪತ್ತನೆ ದಿನದ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಅವರು ಅಲ್ಲಮಪ್ರಭುವಿನ ವಚನ 'ಮಹಾಮಹಿಮ ಸಂಗನ ಬಸವಣ್ಣ ... ಜಗವೆಲ್ಲಕ್ಕೆಯೂ ಗುರು' ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಮಾಜಿ ಶಾಸಕ ಆನಂದ ನ್ಯಾಮಗೌಡ ಮುಖ್ಯ ಅತಿಥಿಯಾಗಿ ಮಾತನಾಡಿ, ಖಾಲಿ ಬಾಟಲ್ಗೆ ಯಾವುದೇ ಮೌಲ್ಯವಿರುವುದಿಲ್ಲ. ಆದರೆ ನೀರು, ತುಪ್ಪ, ಜೇನುತುಪ್ಪದಿಂದ ತುಂಬಿದಾಗ ಬಾಟಲ್ಗೆ ಮೌಲ್ಯ ಬರುತ್ತದೆ. ಹಾಗೆಯೆ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡಾಗ ವ್ಯಕ್ತಿಯ ಮೌಲ್ಯವೂ ಹೆಚ್ಚಾಗುತ್ತದೆ ಎಂದರು.

ಓಲೆಮಠದ ಆನಂದ ದೇವರು ಸಾನಿಧ್ಯ ವಹಿಸಿ ಮಾತನಾಡಿ, ತಂತ್ರಜ್ಞರು ಕೊಡುವ 4 ಜಿ, 5 ಜಿ ತಂತ್ರಜ್ಞಾನಕ್ಕಿಂತ ಹೊಟ್ಟೆಗೆ ಗಂಜಿ ಕೊಡುವ ರೈತರು ಶ್ರೇಷ್ಠ. ಆದ್ದರಿಂದ ರೈತರಿಗೆ ಗೌರವ ಕೊಡಬೇಕು. ರೈತರ ಮಕ್ಕಳಿಗೆ ಹೆಣ್ಣು ಕೊಡಬೇಕು. ಮುಂಬರುವ ಹತ್ತು ವರ್ಷಗಳಲ್ಲಿ ರೈತರ ಬದುಕು ಬಹಳ ಎತ್ತರಕ್ಕೆ ಹೋಗಲಿದೆ ಎಂದು ಆಶೀರ್ವಚನ ನೀಡಿದರು.

ಹಿರಿಯರಾದ ಕೆ. ಕೆ. ತುಪ್ಪದ, ಸಿದ್ರಾಮ ಜಂಬಗಿ ಉಪಸ್ಥಿತರಿದ್ದರು. ಶಾಂತಾ ನ್ಯಾಮಗೌಡ ಪ್ರಾರ್ಥನೆ ಗೀತೆ ಹಾಡಿದರು. ಮಲ್ಲೇಶ ಹೊಸಮನಿ ಸ್ವಾಗತಿಸಿದರು. ಸರಸ್ವತಿ ಸಬರದ (ಹೆಗಡಿ), ಗೋಪಾಲ ತುಳಜಾಪೂರ ಸಂಗೀತ ಸೇವೆ ಸಲ್ಲಿಸಿದರು. ಬಸವರಾಜ ಬಳಗಾರ ನಿರೂಪಿಸಿದರು.

---

# ಬಂಗಾಳದ ಬೆಂಕಿಚೆಂಡು: ಪ್ರೀತಿಲತಾ ಎಂಬ ಕ್ರಾಂತಿಯ ಸಿಡಿಗುಂಡು ಬಂಗಾಳದ ಮೊದಲ ಮಹಿಳಾ ಬಲಿದಾನಿ: ಬ್ರಿಟಿಷರ ನಿದ್ದೆಗೆಡಿಸಿದ ವೀರಾಗ್ರಣಿ

**'ನಾಯಿಗಳು ಮತ್ತು ಭಾರತೀಯರಿಗೆ ಪ್ರವೇಶವಿಲ್ಲ'**

––ಬ್ರಿಟಿಷ್ ರಾಜ್ ಭಾರತದಲ್ಲಿ, ಬ್ರಿಟಿಷರಿಂದ ನಡೆಸಲ್ಪಡುತ್ತಿದ್ದ ಎಲ್ಲಾ ಕ್ಲಬ್ ಗಳ ಮುಂದೆ ಇಂತಹ ಬೋರ್ಡ್ ಗಳು ಮಾಮೂಲಿಯಾಗಿತ್ತು. ಇದನ್ನು ಕಂಡೂ ಕಾಣದಂತಿರುವ ಗುಣ ಭಾರತೀಯರಿಗೆ ಸಹಜವೂ ಆಗಿಬಿಟ್ಟಿತ್ತು. ಆದರೆ ಸ್ವಾತಂತ್ರ್ಯ ಕಿಡಿಯ ಕೆಂಡವನ್ನು ತಮ್ಮ ಎದೆಯಲ್ಲಿಟ್ಟುಕೊಂಡು ಹೋರಾಡುತ್ತಿದ್ದ ಕೆಲವು ಕ್ರಾಂತಿಕಾರಿಗಳಿಗೆ ಇದರ ಹಿಂದಿನ ಕ್ರೌರ್ಯ, ಅಸಹನೆ, ಅಸಡ್ಡೆ, ತುಚ್ಛೀಕರಣದ ಪರಮಾವಧಿಯ ಅರಿವಿತ್ತು. ನಾಯಿಯ ಸಮಕ್ಕೆ ಭಾರತೀಯರನ್ನು ಕಾಣುವ ಕೀಳು ಮಟ್ಟದ ಬ್ರಿಟಿಷರ ಅಭಿರುಚಿ, ಕ್ರಾಂತಿಕಾರರಲ್ಲಿ ಕ್ರೋಧದ ಜ್ವಾಲಾಮುಖಿ ಸಿಡಿಯಲು ಕಾರಣವಾಯಿತು.

ಇಂದಿನ ಬಾಂಗ್ಲಾದೇಶದ ಭಾಗವಾಗಿರುವ, ಅಂದಿನ ಅವಿಭಜಿತ ಬಂಗಾಳದ ಚಿತ್ತಗಾಂಗ್ನ ಪರ್ವತ ಪ್ರದೇಶದಲ್ಲಿದ್ದ, ಪಹರ್ತಲಿ ಯುರೋಪಿಯನ್ ಕ್ಲಬ್ಬೊಂದರ ಮುಂದೆ ನೇತಾಡುತ್ತಿದ್ದ ಇಂತಹದೊಂದು ಬೋರ್ಡ್ ನೋಡಿ, ಹೆಣ್ಣುಮಗಳೊಬ್ಬಳ ಪಿತ್ತ ನೆತ್ತಿಗೇರುತ್ತದೆ. ಭಾರತೀಯರನ್ನು ಇಷ್ಟೊಂದು ಅಪಮಾನಗೊಳಿಸಿರುವ ಬ್ರಿಟಿಷರನ್ನು ಸುಮ್ಮನೆ ಬಿಡಬಾರದೆಂದು ಆಕೆ ನಿರ್ಧರಿಸುತ್ತಾಳೆ.

ಈಗಾಗಲೇ ಬ್ರಿಟಿಷರ ವಿರುದ್ಧ ಕ್ರಾಂತಿಯ ಕಹಳೆಯನ್ನೂದಿ, ಅವರ ನಿದ್ದೆಗೆಡಿಸಿದ್ದ ಕ್ರಾಂತಿಕಾರಿ ಸೂರ್ಯ ಸೇನ್ ನೇತೃತ್ವದ ಯುಗಾಂತರ ಸಂಸ್ಥೆಯ ಸಭೆಯಲ್ಲಿ ಈ ವಿಚಾರ ಪ್ರಸ್ತಾಪವಾಗುತ್ತದೆ. ಸದಸ್ಯರೆಲ್ಲರೂ ಆ ಕ್ಲಬ್ ಮೇಲೆ ದಾಳಿ ನಡೆಸಲು ನಿರ್ಧರಿಸಿ, ಅದರ ಜವಾಬ್ದಾರಿಯನ್ನು ಆ ಹೆಣ್ಣುಮಗಳಿಗೆ ವಹಿಸುತ್ತಾರೆ. ದಾಳಿಯ ರೂಪುರೇಷೆಗಳು ಸಿದ್ಧಗೊಳ್ಳುತ್ತವೆ. ಅಕೆಯನ್ನು 40 ಜನರ ಗುಂಪಿನ ನಾಯಕಿಯನ್ನಾಗಿ ನೇಮಕ ಮಾಡಲಾಗುತ್ತದೆ. ಈ ಗುಂಪನ್ನು ಮೂರು ತಂಡಗಳನ್ನಾಗಿ ವಿಭಜಿಸಿ, ವಿವಿಧ ಜವಾಬ್ದಾರಿಯನ್ನು ವಹಿಸಲಾಗುತ್ತದೆ.

1932 ರ ಸೆಪ್ಟೆಂಬರ್ 24 ರಂದು, ಕ್ಲಬ್ ನಲ್ಲಿ ಸುಮಾರು 50 ಆಂಗ್ಲರು ಮೋಜು–ಮಸ್ತಿಯಲ್ಲಿ ತೊಡಗಿರುತ್ತಾರೆ. ರಾತ್ರಿ 10:45 ಕ್ಕೆ ಸರಿಯಾಗಿ, ಪಂಜಾಬಿ ವೇಷ ಧರಿಸಿದ ಗಂಡಸಿನ ವೇಷದಲ್ಲಿ, ಆ ಹೆಣ್ಣು ಮಗಳು ತನ್ನ 12 ಜನರ ಕ್ರಾಂತಿಕಾರಿಗಳ ತಂಡದೊಂದಿಗೆ ಕ್ಲಬ್ಬಿಗೆ ದಾಳಿ ಮಾಡುತ್ತಾಳೆ. ಹಲವಾರು ಕೈಬಾಂಬ್ ಗಳನ್ನು ಎಸೆಯಲಾಗುತ್ತದೆ. ಕ್ಲಬ್ಬಿನಲ್ಲಿದ್ದ ಓರ್ವ ಮಹಿಳೆ ಸಾವನ್ನಪ್ಪುತ್ತಾರೆ. ನಾಲ್ವರು ಪುರುಷರು ಮತ್ತು ಏಳು ಮಹಿಳೆಯರು ಗಾಯಗೊಳ್ಳುತ್ತಾರೆ. ಅಷ್ಟಕ್ಕೇ ಆ ತಂಡ ಸುಮ್ಮನಾಗದೆ, ಭಾರತೀಯರನ್ನು ನಾಯಿಗೆ ಸಮೀಕರಿಸಿದ್ದ ಸೇಡನ್ನು, ಇಡೀ ಕ್ಲಬ್ ಅನ್ನು ಸುಟ್ಟುಹಾಕುವ ಮೂಲಕ ತೀರಿಸಿಕೊಳ್ಳುತ್ತಾರೆ. ಕೂಡಲೇ ಅಲ್ಲಿದ್ದ ಪೊಲೀಸರು ಪ್ರತಿದಾಳಿ ನಡೆಸಿ ಆಕೆಯ ಸಹಚರರನ್ನು ಹಿಡಿಯುತ್ತಾರೆ.

ಪೊಲೀಸರ ಪ್ರತಿ ದಾಳಿಯಲ್ಲಿ ಆಕೆಗೆ ಒಂದು ಗುಂಡು ತಗಲುತ್ತದೆ. ಆದರೂ ಆಕೆ ತಾನು ತಪ್ಪಿಸಿಕೊಳ್ಳಲು ಬಯಸದೆ, ತನ್ನ ಸಹಚರರನ್ನು ಬಿಡಿಸಲು ಪ್ರಯತ್ನಿಸುತ್ತಾಳೆ ಮತ್ತು ಯಶಸ್ವಿಯಾಗುತ್ತಾಳೆ. ಆ ಪ್ರಯತ್ನದಲ್ಲಿ ತಾನು ಪೊಲೀಸರ ಕೈಸೆರೆಯಾಗುತ್ತಾಳೆ. ಬ್ರಿಟಿಷರ ಕೈಗೆ ಸಿಕ್ಕಿ ಚಿತ್ರಹಿಂಸೆಗೊಳಪಟ್ಟು, ಅವಮಾನಕರ ಸಾವಿಗೆ ಗುರಿಯಾಗಬಾರದೆಂಬುದು ಆಕೆಯ ದೃಢ ನಿಶ್ಚಯವಾಗಿರುತ್ತದೆ. ಹಾಗಾಗಿ ತಾನು ಬರುವಾಗಲೇ ತನ್ನ ಜೊತೆ ತಂದಿದ್ದ ಸಯನೈಡ್ ಅನ್ನು ಸೇವಿಸಿ, ವೀರ ಮರಣವನ್ನಪ್ಪುತ್ತಾಳೆ.

21 ನೇ ವಯಸ್ಸಿನಲ್ಲಿ ಆಕೆಯ ಹುತಾತ್ಮತೆಯು ದೇಶದ ಇತರ ಕ್ರಾಂತಿಕಾರಿಗಳಿಗೆ ಸ್ಫೂರ್ತಿಯಾಗುತ್ತದೆ. ಭಾರತಕ್ಕೆ, ಭಾರತೀಯರಿಗೆ ಅಪಮಾನವಾದರೆ ಈ ದೇಶದ ಸ್ವಾಭಿಮಾನಿ ಮಕ್ಕಳು ಎಂದಿಗೂ ಸಹಿಸುವುದಿಲ್ಲ ಎಂಬುದಕ್ಕೆ ಆಕೆ ನಿದರ್ಶನವಾಗುತ್ತಾಳೆ. ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಸಿಡಿದೆದ್ದು ಆತ್ಮಾರ್ಪಣೆಗೈದ ಬಂಗಾಳದ ಮೊದಲ ಮಹಿಳಾ ಬಲಿದಾನಿ ಎನಿಸುತ್ತಾಳೆ. ಬಂಗಾಳದ ಬೆಂಕಿಚೆಂಡು ಎಂಬ ಗುಣಗಾನಕ್ಕೆ ಪಾತ್ರವಾಗುತ್ತಾಳೆ. ಹಿಂದೂಸ್ಥಾನದ ಸ್ವಾತಂತ್ರ್ಯದ ಆಗಸದಲ್ಲಿ ಧ್ರುವತಾರೆಯಾಗಿ ಮಿನುಗುತ್ತಾಳೆ. ಭಾರತೀಯರೆಲ್ಲರೂ ಸದಾ ನೆನಪಿನಲ್ಲಿಟ್ಟುಕೊಳ್ಳಲೇಬೇಕಾದ ಆ ವೀರವನಿತೆಯೇ ಅಪ್ರತಿಮ ಕ್ರಾಂತಿಕಾರಿಣಿ ಪ್ರೀತಿಲತಾ ವಡ್ಡೆದಾರ್.

ಈ ದಾಳಿ ಬ್ರಿಟಿಷರ ಮೇಲೆ ದೊಡ್ಡ ಪರಿಣಾಮ ಬೀರುತ್ತದೆ. ನಾಯಿಯ ಸಮವಾಗಿ ಭಾರತೀಯರನ್ನು ಕಾಣುತ್ತಿದ್ದ ಬ್ರಿಟಿಷ್ ರಾಜ್ ಧೋರಣೆಯಲ್ಲಿ ಬದಲಾವಣೆಗೆ ಕಾರಣವಾಗುತ್ತದೆ.ಆನಂತರದೇಶದಬಹುತೇಕ ಕ್ಲಬ್ಗಳ ಮುಂದೆ ನೇತುಹಾಕಿದ್ದ 'ನಾಯಿಗಳು ಮತ್ತು ಭಾರತೀಯರಿಗೆ ಪ್ರವೇಶವಿಲ್ಲ' ಎಂಬ ಬೋರ್ಡ್ಗಳು ಒಂದೊಂದಾಗಿ ಮಾಯವಾಗುತ್ತವೆ. ಭಾರತೀಯರ ಪಾಲಿಗೆ ತುಂಬಾ ಅವಮಾನಕರ ಸಂಗತಿಯಾಗಿದ್ದ ಈ ವಿಷಯ, ಪ್ರೀತಿಲತಾರ ಸಾವಿನೊಂದಿಗೆ ಬದಲಾಗುತ್ತದೆ. ಆ ಮೂಲಕ ಆಕೆಯ ಸಾವು ಭಾರತೀಯರ ಸ್ವಾಭಿಮಾನವನ್ನು ಎತ್ತಿ ಹಿಡಿಯಲು ಕಾರಣವಾಗುತ್ತದೆ.

ಪ್ರೀತಿಲತಾ ವಡ್ಡೇದಾರ್, 1911ರ ಮೇ 5 ರಂದು ಮಧ್ಯಮ ವರ್ಗದ ವೈದ್ಯ ಬ್ರಾಹ್ಮಣ ಕುಟುಂಬದಲ್ಲಿ, ಚಿತ್ತಗಾಂಗ್ನ ಪಾಟಿಯಾ ಉಪಜಿಲ್ಲಾದ ಧಾಲ್ಘಾಟ್ ಗ್ರಾಮದಲ್ಲಿ, ಜಗಬಂಧು ವಡ್ಡೇದಾರ್ ಮತ್ತು ಪ್ರತಿಭಾ ದೇವಿ ದಂಪತಿಗೆ ಜನಿಸಿದರು. ಒಟ್ಟು ಆರು ಜನ ಮಕ್ಕಳ ತುಂಬು ಕುಟುಂಬ ಅದಾಗಿತ್ತು. ಆಕೆಯ ತಂದೆ ಪುರಸಭೆಯಲ್ಲಿ ಗುಮಾಸ್ತರಾಗಿದ್ದರು. ತಾಯಿ ಗೃಹಿಣಿಯಾಗಿದ್ದರು. ಇಲ್ಲ ಮಕ್ಕಳಿಗೂ ಒಳ್ಳೆಯ ಶಿಕ್ಷಣ ನೀಡಬೇಕೆಂಬುದು ದಂಪತಿಗಳ ಆಶಯವಾಗಿತ್ತು.

ಪ್ರೀತಿಲತಾ, ಚಿತ್ತಗಾಂಗ್ನ ಖಸ್ತಗೀರ್ ಬಾಲಕಿಂಪುರ ಶಾಲೆಯಲ್ಲಿ ವಿದ್ಯಾಭ್ಯಾಸ ಆರಂಭಿಸಿದರು. ಶಾಲೆಯಶಿಕ್ಷಕಿಯೊಬ್ಬರುತಮ್ಮವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯತೆಯನ್ನು ಪ್ರೇರೇಪಿಸಲು, ಝಾನ್ಸಿ ರಾಣಿ ಲಕ್ಷ್ಮೀಬಾಯಿಯವರ ಸಾಹಸ ಕಥೆಗಳನ್ನು ಹೇಳುತ್ತಿದ್ದರು. ಇದು ಪ್ರೀತಿಲತಾ ಅವರ ಮೇಲೆ ತುಂಬಾ ಪರಿಣಾಮ ಬೀರಿತು. ಆಕೆಯಲ್ಲಿ ರಾಷ್ಟ್ರೀಯ ಪ್ರಜ್ಞೆ ಬಾಲ್ಯದಲ್ಲಿಯೇ ಮೈಗೂಡಲು ಕಾರಣವಾಯಿತು. ನಾನು ಸಹ ಲಕ್ಷ್ಮೀಬಾಯಿಯಂತೆಯೇ ಸಾಹಸ ಮೆರೆಯಬೇಕೆಂಬ ಹಂಬಲ ಅವರ ಮನದಲ್ಲಿ ಮೂಡಿತು.

1927 ರಲ್ಲಿ ಮೆಟ್ರಿಕ್ಯುಲೇಷನ್ ಮುಗಿಸಿದ ಪ್ರೀತಿಲತಾ, ನಂತರ 1929 ರಲ್ಲಿ ಢಾಕಾದ ಈಡನ್ ಕಾಲೇಜಿನಲ್ಲಿ ಇಂಟರ್ಮೀಡಿಯೇಟ್ ಪರೀಕ್ಷೆಯನ್ನು ಮೊದಲ ಶ್ರೇಣಿಯಲ್ಲಿ ಪೂರ್ಣಗೊಳಿಸುತ್ತಾರೆ. ಆ ಸಮಯದಲ್ಲಿಯೇ ಅವರು ವಿವಿಧ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುವ ಮೂಲಕ ಎಲ್ಲರ ಗಮನ ಸೆಳೆಯುತ್ತಾರೆ. ಇಂಟರ್ಮೀಡಿಯೇಟ್ ಓದುತ್ತಿರುವಾಗಲೇ ಆಕೆ ಸ್ವಾತಂತ್ರ್ಯ ಹೋರಾಟಗಾರ್ತಿ ಲೀಲಾ ನಾಗ್ ಅವರ ಜೊತೆ ಸಂಪರ್ಕದಲ್ಲಿರುತ್ತಾರೆ. ಲೀಲಾ ನಾಗ್ ನೇತೃತ್ವದ ದೀಪಾಲಿ ಸಂಘದ ಸದಸ್ಯೆಯೂ ಆಗಿರುತ್ತಾರೆ .ನಂತರ ತತ್ತ್ವಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆಯಲು ಕೋಲ್ಕತ್ತಾದ ಬೆಥೂನ್ ಕಾಲೇಜಿಗೆ ಸೇರುತ್ತಾರೆ.

ಆ ಸಮಯದಲ್ಲಿಯೇ ಆಕೆಯ ತಂದೆಯ ಕೆಲಸ ಹೋಗುತ್ತದೆ. ಇದೀಗ ಕುಟುಂಬದ ಜವಾಬ್ದಾರಿ ಪ್ರೀತಿಲತಾರ ಹೆಗಲಿಗೆ ಬೀಳುತ್ತದೆ. ತುಂಬಾ ಕಷ್ಟದ ಕಾಲವದು. ಆದರೂ ಆಕೆ ಧೃತಿಗೆಡದೆ ತನ್ನ ಶಿಕ್ಷಣವನ್ನು ಮುಂದುವರಿಸುತ್ತಾರೆ. ಪದವಿಯನ್ನು ಮೊದಲ ಶ್ರೇಣಿಯಲ್ಲಿ ಮುಗಿಸುತ್ತಾರೆ. ಕಲೆ ಮತ್ತು ಸಾಹಿತ್ಯ ಪ್ರೀತಿಲತಾ ಅವರ ನೆಚ್ಚಿನ ವಿಷಯಗಳಾಗಿದ್ದವು. ಪ್ರೀತಿಲತಾರವರು ಕ್ರಾಂತಿಕಾರಿಗಳೊಂದಿಗೆ ಗುರುತಿಸಿಕೊಂಡಿದ್ದಾಳೆ ಎಂಬ ಕಾರಣಕ್ಕೆ ಬ್ರಿಟಿಷ್ ಅಧಿಕಾರಿಗಳು ಆಕೆಯ ಪದವಿಯನ್ನು ತಡೆಹಿಡಿಯುತ್ತಾರೆ. ಇದು ಆಕೆಯಲ್ಲಿ ಬ್ರಿಟಿಷರ ವಿರುದ್ಧದ ಕ್ರೋದವನ್ನು ಮತ್ತಷ್ಟು ಹೆಚ್ಚಿಸುತ್ತದೆ. ಪ್ರೀತಿಲತಾ ಅವರು ನಂತರ ಚಿತ್ತಗಾಂಗ್ಗೆ ಹಿಂದಿರುಗುತ್ತಾರೆ. ಕುಟುಂಬದ ಜವಾಬ್ದಾರಿಯು ಆಕೆಯದಾದ್ದರಿಂದ, ನಂದನ್ಕರನ್ ಅಪರ್ಣಾಚರಣ್ ಸ್ಕೂಲ್ ಎಂಬ ಹೈಸ್ಕೂಲಿನಲ್ಲಿ ಮುಖ್ಯ ಶಿಕ್ಷಕಿಯಾಗಿ ಕೆಲಸ ಆರಂಭಿಸುತ್ತಾರೆ. ಕೆಲದಿನಗಳಲ್ಲಿಯೇ ಆಕೆಯ ಕ್ರಾಂತಿಕಾರಿ ಸಹೋದರರೊಬ್ಬರ ಮೂಲಕ ಕ್ರಾಂತಿಕಾರಿ ನಾಯಕ ಸೂರ್ಯ ಸೇನ್ ಮತ್ತು ನಿರ್ಮಲ್ ಸೇನ್ ಅವರ ಪರಿಚಯವಾಗುತ್ತದೆ. ಆ ಪರಿಚಯ ಪ್ರೀತಿಲತಾ ಅವರ ಜೀವನದ ದಿಕ್ಕನ್ನೇ ಬದಲಿಸುತ್ತದೆ. ಆಕೆ ಸಂಪೂರ್ಣವಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ತೊಡಗಿಸಿಕೊಳ್ಳಲು ನಿರ್ಧರಿಸುತ್ತಾರೆ. ಸೂರ್ಯ ಸೇನ್ ರವರು ಪ್ರೀತಿಲತಾರನ್ನು ತಮ್ಮ ಕ್ರಾಂತಿಕಾರಿ ಹೋರಾಟದ ಸಂಘಟನೆ ಯುಗಾಂತರ್ಗೆ ಸೇರಿಸಿಕೊಳ್ಳುತ್ತಾರೆ. ಆಕೆಗೆ ತಮ್ಮ ಧಲ್ಘಾಟ್ ಶಿಬಿರದಲ್ಲಿ ಶಸ್ತ್ರಾಸ್ತ್ರ ಬಳಸುವ ತರಬೇತಿಯನ್ನೂ ನೀಡತೊಡಗುತ್ತಾರೆ.

ಇದು ಯುಗಾಂತರ ಗುಂಪಿನ ಸದಸ್ಯರಲ್ಲಿ ಭಿನ್ನಾಭಿಪ್ರಾಯಕ್ಕೆ ಕಾರಣವಾಯಿತು. ಆ ಕಾಲದಲ್ಲಿ ಕ್ರಾಂತಿಕಾರಿ ಗುಂಪಿಗೆ ಮಹಿಳೆಯನ್ನು ಸೇರಿಸಿಕೊಳ್ಳುವ ಪರಿಪಾಠ ಅಷ್ಟಾಗಿ ಇರಲಿಲ್ಲ. ಪ್ರೀತಿಲತಾ ಅವರು ಈ ಗುಂಪಿಗೆ ಸೇರಿಕೊಂಡಿರುವುದೇ ದೊಡ್ಡ ವಿಷಯವಾಗಿತ್ತು. ಅಂತಹದರಲ್ಲಿ ಶಸ್ತ್ರಾಸ್ತ್ರ ತರಬೇತಿಯನ್ನು ಆಕೆಗೆ ನೀಡುತ್ತಿದ್ದುದು ಹಲವರ ಕಣ್ಣುಗಳನ್ನು ಕೆಂಪಾಗಿಸಿತ್ತು. ಈ ಬಗ್ಗೆ ಚರ್ಚಿಸಲು ಸಭೆ ಕರೆಯಲಾಯಿತು. ಸಭೆಯ ಅಭಿಪ್ರಾಯದಂತೆ ಮಹಿಳೆಯರನ್ನು ಶಸ್ತ್ರಾಸ್ತ್ರ ಹೋರಾಟಕ್ಕೆ ಬಳಸಿಕೊಳ್ಳುವುದು ಬೇಡ. ಬದಲಿಗೆ ಶಸ್ತ್ರಾಸ್ತ್ರಗಳನ್ನು ಒಂದು ಕಡೆಯಿಂದ ಮತ್ತೊಂದೆಡೆ ಸಾಗಿಸುವ ಕೆಲಸಕ್ಕೆ ಅವರನ್ನು ಬಳಸಿಕೊಳ್ಳುವ ತೀರ್ಮಾನವಾಯಿತು. ಇದರಿಂದ ಬ್ರಿಟೀಷರಿಗೆ ಅನುಮಾನ ಬಾರದೆ, ಶಸ್ತ್ರಾಸ್ತ್ರ ಸಾಗಿಸಲು ಸುಲಭವಾಗುತ್ತದೆ ಎಂಬ ನಿರ್ಧಾರಕ್ಕೆ ಬರಲಾಯಿತು.

ಮೊದಲ ಭೇಟಿಯಲ್ಲಿಯೇ ಪ್ರೀತಿಲತಾ ಅವರ ಸಾಮರ್ಥ್ಯವನ್ನು ಅಳೆದು, ಸೂರ್ಯ ಸೇನ್ ರವರು ತಮ್ಮ ಗುಂಪಿಗೆ ಸೇರಿಸಿಕೊಂಡದ್ದು ಸರಿಯಾದ ನಿರ್ಧಾರವೇ ಆಗಿತ್ತು ಎಂಬುದಕ್ಕೆ ಮುಂದಿನ ಘಟನೆ ಸಾಕ್ಷಿಯಾಯಿತು.1930 ರ ಏಪ್ರಿಲ್ 18 ರಂದು ಚಿತ್ತಗಾಂಗ್ ಶಸ್ತ್ರಾಗಾರದ ಮೇಲೆದಾಳಿನಡೆಸಿದಸಮಯದಲ್ಲಿ,ಪ್ರೀತಿಲತಾ ದೂರವಾಣಿ ಮಾರ್ಗಗಳು ಮತ್ತು ಟೆಲಿಗ್ರಾಫ್ ಕಚೇರಿ ನಾಶಪಡಿಸುವ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಿದರು.

ಪ್ರೀತಿಲತಾ ಅವರ ಸಾಹಸ ಸಾಮರ್ಥ್ಯಗಳನ್ನು ಕಂಡ ನಂತರ ಸಂಸ್ಥೆಯಲ್ಲಿ ಅವರಿಗೆ ಹೆಚ್ಚುವರಿ ಜವಾಬ್ದಾರಿಗಳನ್ನು ನೀಡಲಾಯಿತು. ಜಲಾಲಾಬಾದ್ ದಾಳಿಯಲ್ಲಿ ಕ್ರಾಂತಿಕಾರಿಗಳಿಗೆ ಸ್ಫೋಟಕಗಳನ್ನು ಪೂರೈಸುವ ಜವಾಬ್ದಾರಿಯನ್ನು ಪ್ರೀತಿಲತಾ ತೆಗೆದುಕೊಂಡರು. ಆ ದಾಳಿಯಲ್ಲಿ ಆಕೆಯ ಸಾಹಸ, ಶೌರ್ಯಗಳು ಪ್ರಶಂಸೆಗೆ ಪಾತ್ರವಾಯಿತು. ಎಲ್ಲಾ ಕ್ರಾಂತಿಕಾರಕ ದಾಳಿಗಳಲ್ಲಿ ಸ್ಫೋಟಕವನ್ನು ಪೂರೈಸುವುದರಲ್ಲಿ ಪ್ರೀತಿಲತಾ ನಿಸ್ಸೀಮರೆನಿಸಿಕೊಂಡರು. ಮೀಸಲು ಪೊಲೀಸ್ ರೇಖೆಯನ್ನು ವಶಪಡಿಸಿಕೊಳ್ಳುವಂತಹ ಅನೇಕ ದಾಳಿಗಳಲ್ಲಿ ಭಾಗವಹಿಸಿದರು. ಆ ಮೂಲಕ ಬ್ರಿಟಿಷರು ಆಕೆಯ ಚಲನವಲನದ ಮೇಲೆ ಹದ್ದಿನ ಕಣ್ಣಿಟ್ಟರು. ಹಾಗೆಯೇ ಯುಗಾಂತರ ಗುಂಪಿನ ಕಾರ್ಯಚಟುವಟಿಕೆಗಳ ಬಗ್ಗೆ ಸಹ.

ಕ್ರಾಂತಿಕಾರಿಗಳನ್ನುಕಂಡಲ್ಲಿಗುಂಡಿಟ್ಟುಕೊಲ್ಲುವ, ದುಷ್ಟಅಧಿಕಾರಿಯಾಗಿದ್ದಚಿತ್ತಗಾಂಗ್ನಇನ್ಸ್ಪೆಕ್ಟರ್ ಜನರಲ್ ಕ್ರೇಗ್ ಅವರನ್ನು ಸೂರ್ಯ ಸೇನ್ ಮತ್ತು ಅವರ ಕ್ರಾಂತಿಕಾರಿ ಗುಂಪು ಕೊಲ್ಲಲು ನಿರ್ಧರಿಸಿತು. ಈ ಕಾರ್ಯಕ್ಕಾಗಿ ಯುಗಾಂತರ ಗುಂಪಿನ ಮತ್ತೊಬ್ಬ ಪ್ರಮುಖ ನಾಯಕರಾದ ರಾಮಕೃಷ್ಣ ಬಿಸ್ವಾಸ್ ಮತ್ತು ಕಲಿಪಾದ ಚಕ್ರವರ್ತಿ ಅವರನ್ನು ನಿಯೋಜಿಸಲಾಯಿತು. ಆದರೆ ಅವರು ತಪ್ಪಾಗಿ ಕ್ರೇಗ್ ಬದಲಿಗೆ ಚಂದ್ಪುರದ ಎಸ್ಪಿ ತಾರಿಣಿ ಮುಖರ್ಜಿ ಅವರನ್ನು ಕೊಂದರು.1930ರ ಡಿಸೆಂಬರ್ 2ರಂದು ಅವರನ್ನು ಬಂಧಿಸಲಾಯಿತು. ಬಿಸ್ವಾಸ್ ಅವರನ್ನು ಅಲಿಪೋರ್ ಸೆಂಟ್ರಲ್ ಜೈಲಿನಲ್ಲಿರಿಸಿದರು. ಚಕ್ರವರ್ತಿಯನ್ನು ಸೆಲ್ಯುಲಾರ್ ಜೈಲಿಗೆ ಗಡಿಪಾರು ಮಾಡಿದರು.

ಪ್ರೀತಿಲತಾರವರುತಮ್ಮಜೀವವನ್ನುಒತ್ತೆಯಿಟ್ಟು, ಬ್ರಿಟಿಷರಿಗೆಯಾವುದೇಅನುಮಾನಬಾರದಂತೆ, ಬಿಸ್ವಾಸ್ ರವರ ಅಕ್ಕನೆಂದು ಹೇಳಿಕೊಂಡು ಸುಮಾರು 40 ಬಾರಿ ಅವರನ್ನು ಜೈಲಿನಲ್ಲಿ ಭೇಟಿಯಾಗಿದ್ದರು. 1931 ರಲ್ಲಿ ಬಿಸ್ವಾಸ್ ಅವರನ್ನು ಗಲ್ಲಿಗೇರಿಸುವವರೆಗೂ ಈ ಬೇಟಿ ನಿರಂತರವಾಗಿ ನಡೆಯಿತು. ಯುಗಾಂತರ ಗುಂಪಿನ ಹೋರಾಟದ ರೂಪುರೇಷೆಗಳು ಈ ಭೇಟಿಯ ಮೂಲಕ ಸುಗಮವಾಗಿ ನಡೆಯಲು ಆಕೆ ಕಾರಣರಾದರು. ಸೂರ್ಯ ಸೇನ್ ರಂತೆಯೇ ಬಿಸ್ವಸ್ ರವರು ಸಹ, ಆಕೆಯ ಮೇಲೆ ತುಂಬಾ ಪ್ರಭಾವ ಬೀರಿದ್ದರು.

1932 ರ ಜೂನ್ 13 ರಂದು ವಿಷಯವೊಂದರ ಚರ್ಚೆಗೆ ಸಂಬಂಧಿಸಿದಂತೆ, ಪ್ರೀತಿಲತಾ ಮತ್ತು ಇತರ ಕ್ರಾಂತಿಕಾರಿಗಳು ಸೂರ್ಯ ಸೇನ್ ಅವರನ್ನು ಭೇಟಿಯಾಗಲು ಅವರ ಗುಪ್ತ ಸ್ಥಳಕ್ಕೆ ಬಂದರು.ಬ್ರಿಟಿಷರುಅದರಬಗ್ಗೆಸುಳಿವುಪಡೆದು ಅವರ ಮನೆಗೆ ಮುತ್ತಿಗೆ ಹಾಕಿದರು. ಇದು ಘರ್ಷಣೆಗೆ ಕಾರಣವಾಯಿತು. ಕೆಲವು ಕ್ರಾಂತಿಕಾರಿಗಳು ಹುತಾತ್ಮರಾದರೂ, ಸೂರ್ಯ ಸೇನ್ ಮತ್ತು ಪ್ರೀತಿಲತಾ ಇಬ್ಬರೂ ತಪ್ಪಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಇಲ್ಲಿಂದಾಚೆಗೆ ಬ್ರಿಟಿಷರ ದೃಷ್ಟಿಯಲ್ಲಿ ಆಕೆ ಮೋಸ್ಟ್ ವಾಂಟೆಡ್ ಕ್ರಾಂತಿಕಾರಿಯಾದರು.

ಆನಂತರ ನಡೆದ ಘಟನೆಯೇ ಚಿತ್ತಗಾಂಗ್ನಕ್ಲಬ್ ಮೇಲಿನ ದಾಳಿ. 1932 ರ ಸೆಪ್ಟೆಂಬರ್ 24 ರಂದು ನಡೆದ ಈ ದಾಳಿಯಲ್ಲಿ ಪ್ರೀತಿಲತಾ ರವರು ತನ್ನ ಸಹಚರರನ್ನು ರಕ್ಷಿಸಿ, ತಾನು ಸಯನೈಡ್ ಸೇವಿಸಿ ವೀರ ಮರಣವನ್ನು ಅಪ್ಪಿದರು.

ದಾಳಿಯ ದಿನದಂದು ಆಕೆಯ ಸಹಚರರಾದ ಕಾಳಿಶಂಕರ್ ಡೇ, ಬೀರೇಶ್ವರ್ ರಾಯ್, ಪ್ರಫುಲ್ಲ ದಾಸ್, ಶಾಂತಿ ಚಕ್ರವರ್ತಿ, ಮಹೇಂದ್ರ ಚೌಧರಿ, ಸುಶೀಲ್ ಡೇ, ಪನ್ನಾ ಸೇನ್ ಮುಂತಾದವರು ಅವರ ಜೊತೆಗಿದ್ದರು.

ಭಾರತದ ಸ್ವಾತಂತ್ರ್ಯ ಚರಿತ್ರೆಯಲ್ಲಿ ಪ್ರೀತಿಲತಾ ಅವರ ಹೆಸರು ಸಾಹಸ, ಶೌರ್ಯ, ಪರಾಕ್ರಮ, ವೀರತ್ವ, ನಿರ್ಭೀತತೆ, ಕ್ರಾಂತಿ, ಅಜೇಯ ಮುಂತಾದ ಪದಗಳಿಗೆ ಅನ್ವರ್ಥವಾಯಿತು. ಆಕೆ "ಮಹಿಳೆಯರಿಗೆ ಬೆಳಕಿನ ದೀಪ"ವಾಗಿ ಅಜರಾಮರವಾದರು. ಪ್ರೀತಿಲತಾ ಬಲಿದಾನವಾದ ಸ್ಥಳದಲ್ಲಿ ಅವರ ಪುತ್ಥಳಿ ನಿರ್ಮಿಸಿ ಗೌರವ ಸಮರ್ಪಿಸಲಾಗಿದೆ. ಅವರ ನೆನಪಿಗಾಗಿ ಪ್ರೀತಿಲತಾ ಟ್ರಸ್ಟ್ ಸ್ಥಾಪಿಸಿ, ಅದರಡಿಯಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳು, ಸಾಮಾಜಿಕ ಸೇವೆಗಳಲ್ಲಿ ಯಶಸ್ವಿಯಾಗಿ ನಡೆಸಲಾಗುತ್ತಿದೆ.

ಪ್ರೀತಿಲತಾ ಅವರ ಜನ್ಮದಿನವನ್ನು ಪ್ರತಿ ವರ್ಷ ಬಾಂಗ್ಲಾದೇಶ ಮತ್ತು ಭಾರತದ ವಿವಿಧ ಸ್ಥಳಗಳಲ್ಲಿ ಟ್ರಸ್ಟ್ ಆಚರಿಸುತ್ತಿದೆ.

ಬ್ರಿಟಿಷರು ತಡೆಹಿಡಿದಿದ್ದ ಅವರ ಪದವಿಯನ್ನು 82 ವರ್ಷಗಳ ನಂತರ, 2012ರ ಮಾರ್ಚ್ 22 ರಂದು, ಕಲ್ಕತ್ತಾ ವಿಶ್ವವಿದ್ಯಾಲಯ ಮರಣೋತ್ತರವಾಗಿ ಪ್ರದಾನ ಮಾಡಿ ಗೌರವಿಸಿತು.

ಮೇ 5 ರಂದು ಪ್ರೀತಿಲತಾ ಅವರ ಜನ್ಮದಿನ. ಸೆಪ್ಟೆಂಬರ್ 24 ರಂದು ಅವರ ಹುತಾತ್ಮತೆಯ ದಿನ.

––ಈ ಎರಡು ದಿನಗಳು ಭಾರತೀಯರ ಪಾಲಿಗೆ ಸ್ಫೂರ್ತಿಯ ದಿನಗಳಾಗಲಿ. ದೇಶದೆಲ್ಲೆಡೆ ಈ ದಿನಗಳ ನೆನಪು ವಿಜೃಂಭಿಸಲಿ.

***



**ಮಣ್ಣೆ ಮೋಹನ್**
6360507617

# ಚಿಕ್ಕಹೆಸರೂರು 'ನತದೃಷ್ಟ ರಸ್ತೆ': ಮಕ್ಕಳ ಶೈಕ್ಷಣಿಕ ಭವಿಷ್ಯಕ್ಕೆ ಮಂಕು

**ಕುಷ್ಟಗಿ:** ಒಂದು ರಸ್ತೆ ಹಾಳಾಗಿರುವ ಕಾರಣಕ್ಕೆ ಗ್ರಾಮಾಂತರ ಪ್ರದೇಶದ ಮಕ್ಕಳ ಶೈಕ್ಷಣಿಕ ಭವಿಷ್ಯವೂ ಹಾಳಾಗುತ್ತಿದ್ದು ಸರ್ಕಾರದ ದಿವ್ಯ ನಿರ್ಲಕ್ಷ್ಯಕ್ಕೆ ಗ್ರಾಮಸ್ಥರು ಹಿಡಿಶಾಪ ಹಾಕುತ್ತಿದ್ದಾರೆ.

ಪಟ್ಟಣದಿಂದ ಟೆಂಗುಂಟಿ ಮಾರ್ಗವಾಗಿ ಮುದೇನೂರು, ಮುದ್ದಲಗುಂದಿ ಮಾರ್ಗಮಧ್ಯೆ ಬರುವ ತಾಲ್ಲೂಕಿನ ಬಹುತೇಕ ಹಳ್ಳಿಗಳಿಗೆ ಸಂಪರ್ಕ ಕಲ್ಪಿಸುವ ಚಿಕ್ಕಹೆಸರೂರು–ಮುಂಡರಗಿ ರಾಜ್ಯ ಹೆದ್ದಾರಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿದೆ. ನಿರ್ಮಾಣಗೊಂಡು ದಶಕಗಳೇ ಕಳೆದಿವೆ.

ಆದರೆ ಅಂದಿನಿಂದ ಇಲ್ಲಿಯವರೆಗೂ ಕನಿಷ್ಟ ಅರ್ಧವರ್ಷವಾದರೂ ಈ ರಸ್ತೆ ಸುಸ್ಥಿತಿಯಲ್ಲಿಲ್ಲ.

ಪ್ರತಿವರ್ಷವೂ ದುರಸ್ತಿಯಾಗುತ್ತದೆ. ಆದರೆ ದುಸ್ಥಿತಿ ಹಾಗೇ ಮುಂದುವರಿದು ಈ ಮಾರ್ಗದಲ್ಲಿ ಬರುವ ಹಳ್ಳಿಗಳ ಜನರ ನೆಮ್ಮದಿ ಕಸಿದುಕೊಂಡಿದೆ.

**ಶಿಕ್ಷಣಕ್ಕೆ ಪೆಟ್ಟು:** ಕುಷ್ಟಗಿಯಿಂದ ಮುದೇನೂರುವರೆಗಿನ 20 ಕಿಮೀದಲ್ಲಿ ಎಣಿಸುತ್ತ ಹೋದರೆ ತೆಗ್ಗಿಹಾಳ, ಕೂಡ್ಲೂರು, ಮುದೇನೂರು, ಕೆ.ಗೋನಾಳ, ಬಸಾಪುರ, ಟೆಂಗುಂಟಿ ಇತರೆ



ಗ್ರಾಮಗಳ ಸೀಮಾಂತರದಲ್ಲಿ ನೂರಾರು ತಗ್ಗು ಗುಂಡಿಗಳು ಕಂಡುಬರುತ್ತವೆ.

ಬಸ್‌ಗಳಿಗೆ ಧಕ್ಕೆಯಾಗುತ್ತದೆ, ಟೈರ್‌ಗಳು ಒಡೆಯುತ್ತವೆ ಎಂಬ ಸಹಜ ಕಾರಣಕ್ಕೆ ಸಾರಿಗೆ ಇಲಾಖೆಯವರು ಬಸ್ ಸಂಚಾರ ಸ್ಥಗಿತಗೊಳಿಸುತ್ತಾರೆ ಎಂಬುದು ತಿಳಿದಿದೆ.

ಟಂಟಂ, ಬೈಕ್ ಹೀಗೆ ಇತರೆ ವಾಹನಗಳ ಮೂಲಕ ಜನರು ಹೇಗೋ ಪಟ್ಟಣ ಇತರೆ ಊರುಗಳಿಗೆ ಹೋಗಿ ಬರುತ್ತಾರೆ. ಆದರೆ ಬಸ್ ಬಾರದ ಕಾರಣಕ್ಕೆ ಮಕ್ಕಳು ಶಾಲೆಗೆ ಹೋಗಲಾರದೆ ಮನೆಯಲ್ಲಿಯೇ ಉಳಿಯುವಂತಾಗಿದ್ದು ಅವರ ಶೈಕ್ಷಣಿಕ ಭವಿಷ್ಯ ಮಣ್ಣುಪಾಲಾಗುತ್ತದೆ. ಸಮಸ್ಯೆ ಪರಿಹಾರಕ್ಕೆ ಯಾರೂ ಮುಂದಾಗಿಲ್ಲ ಎಂಬ ಅಸಮಾಧಾನ ಆ ಮಾರ್ಗದಲ್ಲಿ ಬರುವ ಗ್ರಾಮಗಳ ಜನರದು.

**ಬೇಸತ್ತ ಮಕ್ಕಳು: ಬಸ್ ಮುಂದೆ ಧರಣಿ**

ತೆಗ್ಗಿಹಾಳ, ಕೂಡ್ಲೂರು, ಕೆ.ಗೋನಾಳ ಇತರೆ ಗ್ರಾಮಗಳ ನೂರಾರು ಮಕ್ಕಳು ಮುದೇನೂರಿನಲ್ಲಿರುವ ಪ್ರೌಢಶಾಲೆಗೆ ಹೋಗಬೇಕು. ಆದರೆ ರಸ್ತೆ ಕೆಟ್ಟಿದೆ ಎಂಬ ಕಾರಣಕ್ಕೆ ಒಂದು ವಾರದಿಂದಲೂ ಕುಷ್ಟಗಿ ಘಟಕದ ಸಾರಿಗೆ ಬಸ್‌ಗಳು ಈ ಮಾರ್ಗದಲ್ಲಿ ಸಂಚರಿಸುತ್ತಿಲ್ಲ. ಕಾರಣ ಮಕ್ಕಳಿಗೆ ಶಾಲೆಗೆ ಹೋಗದಂತಾಗಿದೆ.

ಹಾಗಾಗಿ ಬೇಸತ್ತ ತೆಗ್ಗಿಹಾಳ ಗ್ರಾಮದ ಶಾಲಾ ಮಕ್ಕಳು, ಸಾರ್ವಜನಿಕರು ತಮ್ಮ ಗ್ರಾಮದವರೆಗೆ ಮಾತ್ರ ಬಂದ ಸಾರಿಗೆ ಬಸ್ ಅನ್ನು ಅಡ್ಡಗಟ್ಟಿ ನಿಲ್ಲಿಸಿ ದಿಢೀರ್ ಪ್ರತಿಭಟನೆಗಿಳಿದಿದ್ದರು.

ಈ ವಿಷಯ ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ಬಂದ ನಂತರ ಗುಂಡಿಗಳನ್ನು ತಾತ್ಕಾಲಿಕವಾಗಿ ಮುಚ್ಚುವ ಕೆಲಸ ನಡೆಯಿತು.

ನಂತರ ಪ್ರಯಾಸವಾದರೂ ಮುದೇನೂರುವರೆಗೆ ಬಸ್ ಬಿಡುವುದಕ್ಕೆ ಘಟಕ ವ್ಯವಸ್ಥಾಪಕರು ಒಪ್ಪಿದ ನಂತರ ಮಕ್ಕಳು ಪ್ರತಿಭಟನೆ ಕೈಬಿಟ್ಟರು. ಕಳೆದ ಎರಡು ವಾರಗಳಿಂದಲೂ ನಿರಂತರ ಮಳೆ ಬರುತ್ತಿದ್ದು ರಸ್ತೆ ಗುಂಡಿಗಳು ನೀರಿನಿಂದ ಭರ್ತಿಯಾಗಿವೆ.

ಗುಂಡಿ ಎಷ್ಟು ಆಳ ಇವೆ ಎಂಬುದು ಗೊತ್ತಾಗುತ್ತಿಲ್ಲ.

ಏನಾದರೂ ಹೆಚ್ಚುಕಡಿಮೆಯಾದರೆ ನಾವೇ ಜವಾಬ್ದಾರಿಯಾಗಬೇಕಾಗುತ್ತದೆ. ರಸ್ತೆ ಸರಿಯಾಗಿದ್ದರೆ ಬಸ್ ಓಡಿಸುವುದಕ್ಕೆ ಸಮಸ್ಯೆಯೇ ಇರುವುದಿಲ್ಲ.

ಇದನ್ನು ಜನರೂ ಅರ್ಥಮಾಡಿಕೊಳ್ಳುತ್ತಿಲ್ಲ ಎಂದು ಸಾರಿಗೆ ಸಂಸ್ಥೆಯ ಸಿಬ್ಬಂದಿ ಸಮಸ್ಯೆ ವಿವರಿಸಿದರು.

# 'ಯತ್ನಾಳ ವಿರುದ್ಧ ಪ್ರಕರಣ ದಾಖಲಿಸಲು ಒತ್ತಾಯ'



**ಕೊಪ್ಪಳ:** ಮುಂಬರುವ ಗಣೇಶ ಹಬ್ಬದ ಸಂದರ್ಭದಲ್ಲಿ ಶಾಂತಿ ಸೌಹಾರ್ದತೆ ಕಾಪಾಡಲು ವಿಶೇಷ ಕ್ರಮ ಕೈಗೊಳ್ಳಬೇಕು ಹಾಗೂ ಶಾಸಕ ಬಸನಗೌಡ ಪಾಟೀಲ ಯತ್ನಾಳ ವಿರುದ್ಧ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಬೇಕು ಎಂದು ಆಗ್ರಹಿಸಿ ಪ್ರಗತಿಪರ ಸಂಘಟನೆಗಳ ಒಕ್ಕೂಟದಿಂದ ಮಂಗಳವಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್. ಆರಸಿದ್ದಿ ಮನವಿ ಸಲ್ಲಿಸಲಾಯಿತು.

ಕೊಪ್ಪಳ ಶಾಂತಿ, ಸೌಹಾರ್ದತೆಗೆ ಹೆಸರಾಗಿದ್ದು, ಈ ಹಿಂದೆ ಗಣೇಶ ವಿಸರ್ಜನೆ ಸಮಯದಲ್ಲಿ ಸಣ್ಣ ಪುಟ್ಟ ಗಲಾಟೆಗಳು ಸಂಭವಿಸಿವೆ. ಆದರೆ ಇತ್ತೀಚೆಗೆ ಗವಿಸಿದ್ದಪ್ಪ ನಾಯಕ ಕೊಲೆ ನಡೆದ ದಿನದಿಂದ ನಿತ್ಯ ಬೆಳವಣಿಗೆ ನಡೆಯುತ್ತಿವೆ. ಕೆಲವು ಕೋಮುವಾದಿ ಸಂಘಟನೆಗಳು ಈ ಪ್ರಕರಣವನ್ನೇ ನೆಪವಾಗಿಟ್ಟುಕೊಂಡು ತಮ್ಮ ಅಜೆಂಡಾ ಜಾರಿಗೊಳಿಸಲು ಪ್ರಯತ್ನಿಸುತ್ತಿವೆ. ಒಂದು ಸಮುದಾಯವನ್ನು ಟಾರ್ಗೆಟ್ ಮಾಡಿ ಮಾತನಾಡುತ್ತಿವೆ. ಆದ್ದರಿಂದ ಶಾಂತಿ ವಾತಾವರಣ ಇರುವಂತೆ ನೋಡಿಕೊಳ್ಳಲು ಕ್ರಮ ವಹಿಸಬೇಕು' ಎಂದು ಆಗ್ರಹಿಸಿದ್ದಾರೆ. ಮುಸ್ಲಿಂ ಯುವತಿಯನ್ನು ಪ್ರೀತಿಸಿ ಮದುವೆಯಾಗುವ ಹಿಂದೂ ಯುವಕರಿಗೆ ?5 ಲಕ್ಷ ನೀಡಲಾಗುವುದು ಎಂದು ಯತ್ನಾಳ ಇತ್ತೀಚೆಗೆ ಕೊಪ್ಪಳಕ್ಕೆ ಭೇಟಿ ನೀಡಿದಾಗ ಹೇಳಿಕೆ ನೀಡಿದ್ದರು.

ಪ್ರಗತಿಪರ ಸಂಘಟನೆಗಳ ಒಕ್ಕೂಟದ ಮುಖಂಡರಾದ ಅಲ್ಲಮಪ್ರಭು ಬೆಟ್ಟದೂರು, ಮಹಾಂತೇಶ ಕೋತಬಾಳ, ಎಸ್.ಎ.ಗಫಾರ, ಚನ್ನಬಸಪ್ಪ ಅಪ್ಪಣವರ, ಕೆ.ಬಿ. ಗೋನಾಳ, ಗಾಳೆಪ್ಪ ಮುಂಗೋಲಿ, ಮಖಬೂಲ್ ರಾಯಚೂರು, ಶಿವಪ್ಪ ಹಡಪದ, ಬಸವರಾಜ್ ಶೀಲವಂತರ ಇದ್ದರು.

# ಧರ್ಮಸ್ಥಳ ಕ್ಷೇತ್ರದ ಅಪಪ್ರಚಾರದ ವಿರುದ್ಧ ಕ್ರಮಕ್ಕೆ ಒತ್ತಾಯ

**ಕೊಪ್ಪಳ :** 'ಧರ್ಮಸ್ಥಳ ಕ್ಷೇತ್ರದ ಬಗ್ಗೆ ಅಪಪ್ರಚಾರ ಮಾಡಿ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರ ತೇಜೋವಧೆ ಮಾಡುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ನಗರದ ಪ್ರಮುಖ ಬೀದಿಗಳಲ್ಲಿ ಬುಧವಾರ ಜಿಲ್ಲಾ ಜೈನ ಸಮಾಜ ಮತ್ತು ಧರ್ಮಸ್ಥಳ ಭಕ್ತವೃಂದದ ನೇತೃತ್ವದಲ್ಲಿ ಜನರು ಜನಾಗ್ರಹ ಜಾಥಾ ನಡೆಸಿದರು.

ಪ್ರತಿಭಟನಾ ನಿರತರು ಈಗ ಅಲ್ಲಿ ನಡೆಯುತ್ತಿರುವ ಕಾರ್ಯಾಚರಣೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ 'ಕೆಲವರು ಧರ್ಮಸ್ಥಳ ದೇವಾಲಯವನ್ನು ಗುರಿಯಾಗಿಸಿಕೊಂಡು ಯಾವುದೇ ದಾಖಲೆಗಳಿಲ್ಲದೆ, ನಿರಂತರವಾಗಿ ಸುಳ್ಳು ಸುದ್ದಿ ಪ್ರಸಾರ ಮಾಡುತ್ತಿದ್ದು, ಇದರಿಂದ ಕ್ಷೇತ್ರದ ಕೋಟ್ಯಂತರ ಭಕ್ತರ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗಿದೆ. ಇದರಿಂದಾಗಿ ಈಗಾಗಲೇ ಸಮಾಜದಲ್ಲಿ ಎರಡು ಬಣಗಳು ನಿರ್ಮಾಣವಾಗುವ ಲಕ್ಷಣ ಗೋಚರಿಸುತ್ತಿವೆ' ಎಂದು ಆತಂಕ ವ್ಯಕ್ತಪಡಿಸಿದರು.

ಜೆಡಿಎಸ್ ರಾಜ್ಯ ಕೋರ್ ಕಮಿಟಿ ಸದಸ್ಯ ಸಿ.ವಿ.ಚಂದ್ರಶೇಖರ್, ಜಿಲ್ಲಾಧ್ಯಕ್ಷ ಸುರೇಶ ಭೂಮರಡ್ಡಿ, ರಾಘವೇಂದ್ರ ಪಾನಘಂಟಿ, ರಾಧಾ ಕುಲಕರ್ಣಿ, ವೇಣುಗೋಪಾಲ್ ಸಿಂಗ್, ನಗರಸಭೆ ಸದಸ್ಯರಾದ



ಅಕ್ಬರ್ ಪಾಷಾ ಪಲ್ಟನ್, ಬಸಯ್ಯ ಹಿರೇಮಠ, ಲತಾ ಚಿನ್ನೂರು, ಭಾಗ್ಯನಗರ ಪಟ್ಟಣ ಪಂಚಾಯಿತಿ ಸದಸ್ಯರಾದ ರಮೇಶ ಹ್ಯಾಟಿ, ಚಂದ್ರು ಉಂಕಿ, ಗ್ರಾ.ಪಂ. ಸದಸ್ಯರಾದ ಜಗದೀಶ ಚಿನ್ನೂರು, ನಿಂಗಪ್ಪ ಮೇಟಿ, ಶರಣಪ್ಪ ಮತ್ತೂರು, ಮಲ್ಲಪ್ಪ ದೇವರಮನಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

ನಗರದ ಈಶ್ವರ ದೇವಸ್ಥಾನದಿಂದ ಆರಂಭವಾದ ಜನಾಗ್ರಹ ಜಾಥಾ ಅಶೋಕ ವೃತ್ತ, ಹೊಸಪೇಟೆ ರಸ್ತೆಯ ಮೂಲಕ ಬಸವೇಶ್ವರ ವೃತ್ತದ ಮಾರ್ಗವಾಗಿ ಜಿಲ್ಲಾಡಳಿತ ಭವನದ ತನಕ ಸಾಗಿತು. ಬಳಿಕ ಹೆಚ್ಚುವರಿ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಅವರಿಗೆ ಮನವಿ ಸಲ್ಲಿಸಿದರು.

# ಒಳಮೀಸಲಾತಿ | ಲೋಪಗಳ ಪರಿಶೀಲನೆಗೆ ಉಪಸಮಿತಿ ರಚಿಸಿ: ಕೃಷ್ಣ ಇಟ್ಟಂಗಿ

**ಕೊಪ್ಪಳ :** 'ಒಳಮೀಸಲಾತಿ ಜಾರಿಗೆ ರಚಿಸಲಾಗಿದ್ದ ನಾಗಮೋಹನ್‌ದಾಸ್ ವರದಿಯಲ್ಲಿ ಅನೇಕ ಲೋಪಗಳಿದ್ದು, ಇದರಿಂದ ಬಲಗೈ ಸಮುದಾಯಕ್ಕೆ ಅನ್ಯಾಯವಾಗುತ್ತಿದೆ. ನಮ್ಮ ಸಮುದಾಯದ ಬಗ್ಗೆ ಪೂರ್ವಗ್ರಹ ಪೀಡಿತರಾಗಿ ಅವರು ವರದಿ ನೀಡಿದ್ದು ವರದಿಯಲ್ಲಿನ ಲೋಪಗಳ ಬಗ್ಗೆ ಪರಿಶೀಲನೆಗೆ ಸಂಪುಟ ಉಪಸಮಿತಿ ರಚಿಸಬೇಕು' ಎಂದು ಕರ್ನಾಟಕ ಚಲವಾದಿ ಮಹಾಸಭಾದ ಮುಖಂಡರು ಆಗ್ರಹಿಸಿದ್ದಾರೆ.

ಸಮುದಾಯದ ಮುಖಂಡ ಕೃಷ್ಣ ಇಟ್ಟಂಗಿ ಅವರು ನಗರದಲ್ಲಿ ಬುಧವಾರ ಪತ್ರಿಕಾಗೋಷ್ಠಿ ನಡೆಸಿ 'ನಾಗಮೋಹನದಾಸ್ ವರದಿಯನ್ನು



ಸಚಿವ ಸಂಪುಟ ಒಪ್ಪಬಾರದು. ಮಾದಿಗ ಸಮುದಾಯಕ್ಕೆ ಎಷ್ಟೇ ಮೀಸಲಾತಿ ಕೊಟ್ಟರೂ ಅದಕ್ಕೆ ನಮ್ಮ ವಿರೋಧವಿಲ್ಲ. ಆದರೆ ನಮಗೆ ಆದ ಅನ್ಯಾಯ ಸರಿಪಡಿಸಿ ವರದಿ ಜಾರಿ ಮಾಡಬೇಕು. ಸಮೀಕ್ಷೆ ವೇಳೆ ಅನುಸರಿಸಬೇಕಿದ್ದ ಅನೇಕ ಕ್ರಮಗಳನ್ನು ಪಾಲನೆ ಮಾಡಿಲ್ಲ. ಗ್ರಾಮಾಂತರ ಗ್ರಾಮ ಪಂಚಾಯಿತಿ ಕಚೇರಿ, ನಗರ ಸ್ಥಳೀಯ ಸಂಸ್ಥೆಗಳ ಕಚೇರಿಗಳಲ್ಲಿ ಬೂತ್‌ಗಳನ್ನು ಆರಂಭಿಸಿ ಸಮೀಕ್ಷೆಗೆ ಅವಕಾಶ ಕಲ್ಪಿಸಲಾಗುವುದು ಎಂದು ಹೇಳಿದ್ದರೂ ಆಯೋಗ ಅದನ್ನು ಮಾಡಿಲ್ಲ' ಎಂದರು.

ಮನೆಮನೆಗೆ ತೆರಳಿ ಮಾಹಿತಿ ಸಂಗ್ರಹಿಸದೇ ಸಮೀಕ್ಷೆ ಮಾಡಿರುವ ಕಾರಣ ಈ ದತ್ತಾಂಶಗಳನ್ನು ದೃಢೀಕರಿಸಲು 15 ದಿನ ಅವಕಾಶ ಕೊಡಬೇಕು. ಆಕ್ಷೇಪಣೆಗಳನ್ನು ತಂತ್ರಾಂಶದ ಮೂಲಕ ಆಹ್ವಾನಿಸಬೇಕು. ಆಯೋಗವು ದುರುದ್ದೇಶಪೂರ್ವಕವಾಗಿ ಪರೈಯ್ಯ ಪರವನ್ ಸಮುದಾಯವನ್ನು ಎಡಗೈ ಗುಂಪಿಗೆ ಸೇರಿಸಿರುವುದನ್ನು ರದ್ದುಪಡಿಸಿ ಬಲಗೈ ಗುಂಪಿಗೆ ಸೇರ್ಪಡೆ ಮಾಡಬೇಕು. ಜಾತಿಗಳೇ ಇಲ್ಲದ ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಸಮೂಹಗಳಿಗೆ ನಿಗದಿಪಡಿಸಿರುವ ಶೇ 1ರಷ್ಟು ಮೀಸಲಾತಿ ರದ್ದುಪಡಿಸಿ ಆಯಾ ಜಾತಿಗಳಿಗೆ ಮರುಹಂಚಿಕೆ ಮಾಡಬೇಕು ಎನ್ನುವುದು ಎಲ್ಲ ಬಲಗೈ, ಚಲವಾದಿ ಹಾಗೂ ಹೊಲೆಯ ಸಮುದಾಯದ ಸಂಘಟನೆಗಳ ಬೇಡಿಕೆಯಾಗಿದೆ. ಇದನ್ನು ಸರ್ಕಾರದ ಗಮನಕ್ಕೂ ತರಲಾಗಿದೆ' ಎಂದು ತಿಳಿಸಿದರು.

# ಹೋರಾಟಗಾರರ ಕನಸುಗಳ ಭಾರತವನ್ನು ಕಟ್ಟೋಣ! ಬಸವರಾಜ ಕುಂಬಳಾವತಿ

**ಕಮತಗಿ :** ಹೋರಾಟಗಾರರ ಕನಸುಗಳ ಭಾರತವನ್ನು ಕಟ್ಟೋಣ ವೆಂದು ಕಮತಗಿ ಪಟ್ಟಣ ಪಂಚಾಯತ್ ಅಧ್ಯಕ್ಷ ಬಸವರಾಜ ಕುಂಬಳಾವತಿ ಹೇಳಿದರು. ಇಲ್ಲಿನ ಪಟ್ಟಣ ಪಂಚಾಯತ್ ಕಚೇರಿಯಲ್ಲಿ ಸ್ವಾತಂತ್ರೋತ್ಸವದ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

"ದೇಶದ ಸ್ವಾತಂತ್ರ್ಯಕ್ಕಾಗಿ ನಮ್ಮ ಹೋರಾಟಗಾರರು ಅಪಾರ ತ್ಯಾಗ ಮತ್ತು ಬಲಿದಾನ ಮಾಡಿದ್ದಾರೆ. ಅವರ ಕನಸುಗಳನ್ನು ನನಸು ಮಾಡುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ. ಹೋರಾಟಗಾರರ ಕನಸುಗಳ ಭಾರತವನ್ನು ಕಟ್ಟೋಣ" ಎಂದು ಸಾರ್ವಜನಿಕರಿಗೆ ಸಂದೇಶ ನೀಡಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷೆ ಶ್ರೀಮತಿ ನೇತ್ರಾವತಿ ನಿಂಬಲಗುಂದಿ, ಪಪಂ ಸದಸ್ಯರು, ಮುಖ್ಯಾಧಿಕಾರಿ ಎಫೊ. ಎನ್. ಹಲ್ಲಿಕೇರಿ, ಸಿಬ್ಬಂದಿ, ಸ್ಥಳೀಯರು



ಹಾಗೂ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಧ್ವಜಾರೋಹಣದ ನಂತರ ವಿದ್ಯಾರ್ಥಿಗಳಿಗೆ ಉಚಿತ ನೋಟ್ ಬುಕ್ ವಿತರಣೆ ಹಾಗೂ ರಾಜ್ಯ ಪ್ರಶಸ್ತಿ ವಿಜೇತ ಲಕ್ಷ್ಮಣ ಕಕ್ಕನ್ನವರ ಅವರಿಗೆ ಈ ಸಂದರ್ಭದಲ್ಲಿ ಗೌರವಿಸಿ ಸನ್ಮಾನಿಸಲಾಯಿತು.

# ರಾಷ್ಟ್ರಧ್ವಜ ಹಾರಿಸದ ಬ್ಯಾಂಕ್ ಶಾಖೆಗಳ ವಿರುದ್ಧ ಆಕ್ರೋಶ

**ಬಾಗಲಕೋಟೆ :** ದೇಶಾದ್ಯಂತ ಅನೇಕ ಶಾಖೆಗಳನ್ನು ಹೊಂದಿರುವ ಬ್ಯಾಂಕ್ ಆಫ್ ಬರೋಡಾ ಸೇರಿದಂತೆ ಕೆಲವು ಬ್ಯಾಂಕ್ ಶಾಖೆಗಳು ಸ್ವಾತಂತ್ರ್ಯೋತ್ಸವ ದಿನ ರಾಷ್ಟ್ರಧ್ವಜವನ್ನು ಹಾರಿಸದಿರುವುದು ಯಕ್ಷಪ್ರಶ್ನೆಯಾಗಿದೆ ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಜಿಲ್ಲಾ ಉಪಾಧ್ಯಕ್ಷ ಸಂತೋಷ ಹೂಗಾರ ಆರೋಪಿಸಿದ್ದಾರೆ.



ನಗರದ ವಿದ್ಯಾಗಿರಿ ಪ್ರದೇಶದ ಬ್ಯಾಂಕ್ ಆಫ್ ಬರೋಡಾ ಶಾಖೆ ಎದುರು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬ್ಯಾಂಕ್ ಆಫ್ ಇಂಡಿಯಾ, ಮುತ್ತೂಟ್ ಫಿನ್ ಕಾರ್ಪ್ ಸೇರಿದಂತೆ ಹಲವು ಆರ್ಥಿಕ ಸಂಸ್ಥೆಗಳು ಹಾಗೂ ಬ್ಯಾಂಕ್ ಶಾಖೆಗಳು ರಾಷ್ಟ್ರಧ್ವಜವನ್ನು ಹಾರಿಸದಿರುವುದು ದೇಶಭಕ್ತಿಯ ಆತ್ಮವನ್ನು ದುರ್ಬಲಗೊಳಿಸುವಂತಹ ಘಟನೆ ಎಂದರು.

"ಬೀದಿ ಬದಿಯ ಅಂಗಡಿಗಳು, ವ್ಯಾಪಾರ ಮಳಿಗೆಗಳು ಹಾಗೂ ಸಾಮಾನ್ಯ ನಾಗರಿಕರು ತಮ್ಮ ಮನೆ, ವಾಹನ ಮತ್ತು ಅಂಗಡಿಗಳಿಗೆ ರಾಷ್ಟ್ರಧ್ವಜ ಅಲಂಕಾರ ಮಾಡುತ್ತಿರುವಾಗ, ದೊಡ್ಡ ಸಂಸ್ಥೆಗಳು ಕೇವಲ ಅರ್ಧ ಗಂಟೆ ಸಮಯ ಮೀಸಲಿಟ್ಟು ರಾಷ್ಟ್ರಧ್ವಜ ಹಾರಿಸುವ ಪುಣ್ಯದಿಂದ ದೂರವಿರುವುದು ಬೇಸರಕಾರಿ," ಎಂದು ಹೂಗಾರ ಹೇಳಿದರು. ಮುಂದಿನ ದಿನಗಳಲ್ಲಿ ಇಂತಹ ಶಾಖೆಗಳು ರಾಷ್ಟ್ರಧ್ವಜವನ್ನು ಹಾರಿಸಿ ದೇಶದ ಗೌರವವನ್ನು ಕಾಪಾಡಬೇಕು ಎಂದು ಆಗ್ರಹಿಸಿದರು.

# ಎಂಬಿಎ ವಿದ್ಯಾರ್ಥಿಗಳು ಅವಕಾಶ ಬಳಸಿಕೊಂಡು ಉತ್ತಮ ಉದ್ಯಮಿಗಳಾಗಿ: ಸುನೀಲಗೌಡ ಕರೆ

**ವಿಜಯಪುರ :** ವಾಣಿಜ್ಯ ಮತ್ತು ವ್ಯವಹಾರ ಕ್ಷೇತ್ರದಲ್ಲಿ ವ್ಯಾಪಕ ಅವಕಾಶಗಳಿದ್ದು ಎಂ.ಬಿ.ಎ ವಿದ್ಯಾರ್ಥಿಗಳು ಉತ್ತಮ ಜ್ಞಾನಾರ್ಜನೆ ಮತ್ತು ವೃತ್ತಿ ಕೌಶಲ್ಯಗಳನ್ನು ಬೆಳೆಸಿಕೊಂಡು ಯುವ ಉದ್ಯಮಿಗಳಾಗಿ ನಾಡಿನ ಕೀರ್ತಿ ಬೆಳಗಬೇಕು ಎಂದು ಬಿ.ಎಲ್.ಡಿ.ಇ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಮತ್ತು ವಿಧಾನ ಪರಿಷತ್ ಶಾಸಕ ಸುನೀಲಗೌಡ ಪಾಟೀಲ ಕರೆ ನೀಡಿದ್ದಾರೆ.

ಸೋಮವಾರ ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಎ.ಎಸ್.ಪಿ ಕಾಮರ್ಸ್ ಅಟೋನಾಮಸ್ ಕಾಲೇಜಿನಲ್ಲಿ ಡಿಪಾರ್ಟಮೆಂಟ್ ಆಫ್ ಮ್ಯಾನೇಜಮೆಂಟ್ ಸ್ಟಡೀಸ್ ಮತ್ತು ಸಂಶೋಧನ ಕೇಂದ್ರ ಆಯೋಜಿಸಿದ್ದ ಪಾಲಕರು ಮತ್ತು ಕಾಲೇಜು ಆಡಳಿತ ಮಂಡಳಿ ಸಭೆಯಲ್ಲಿ 14 ಜನ ವಿದ್ಯಾರ್ಥಿಗಳಿಗೆ ನೇಮಕಾತಿ ಆದೇಶ ಪತ್ರ ವಿತರಿಸಿ ಅವರು ಮಾತನಾಡಿದರು.

ಈಗ ಮೆಡಿಕಲ್ ಮತ್ತು ಎಂಜಿನಿಯರಿಂಗ್ ಕೋರ್ಸುಗಳಿಗೆ ಸರಿಸಮನಾಗಿ ಮ್ಯಾನೇಜಮೆಂಟ್ ಕೋರ್ಸ್‌ಗಳಿಗೆ ಹೆಚ್ಚಿನ ಬೇಡಿಕೆ ಇದೆ. ವೃತ್ತಿ ಕೌಶಲ್ಯ ಹೊಂದಿದವರಿಗೆ ಮಾರುಕಟ್ಟೆಯಲ್ಲಿ ಉತ್ತಮ ಅವಕಾಶಗಳೂ ಇವೆ. ವಿದ್ಯಾರ್ಥಿಗಳು ಆಧುನಿಕ ಅವಶ್ಯಕತೆಗಳಿಗೆ ತಕ್ಕಂತೆ ಅಧ್ಯಯನ ಮತ್ತು ಸಂಶೋಧನೆ ನಡೆಸಿ ಹೊಸ ತಂತ್ರಜ್ಞಾನ ಸದುಪಯೋಗ ಪಡಿಸಿಕೊಂಡ ವ್ಯವಹಾರ ಪ್ರಾರಂಭಿಸಿ ಜೀವನದಲ್ಲಿ ಯಶಸ್ವಿ ಉದ್ಯಮಿಯಾಗಬೇಕು. ಪಾಲಕರೂ ಕೂಡ ತಮ್ಮ ಮಕ್ಕಳಿಗೆ ಈ ನಿಟ್ಟಿನಲ್ಲಿ ಪ್ರೋತ್ಸಾಹ




ನೀಡಬೇಕು. ಬಿ.ಎಲ್.ಡಿ.ಇ ಸಂಸ್ಥೆ ನವ್ಯೋದ್ಯಮಕ್ಕಾಗಿ ಇನಕ್ಯೂಬೇಶನ್ ಸೆಂಟರ್ ಪ್ರಾರಂಭಿಸಿದ್ದು, ಅಲ್ಲಿ ಸ್ಟಾರ್ಟಪ್ ಮತ್ತು ಪ್ಲೇಸಮೆಂಟ್‌ಗೆ ಬೇಕಾದ ನೆರವು ಲಭ್ಯವಿದೆ. ಎಂ.ಬಿ.ಎ ಕಾಲೇಜನ್ನು ರಾಜ್ಯದ ಅತ್ಯುತ್ತಮ ಮ್ಯಾನೇಜಮೆಂಟ್ ಕಾಲೇಜನ್ನಾಗಿ ಮಾಡುವ ಗುರಿ ಇದೆ ಎಂದು ಅವರು ತಿಳಿಸಿದರು.

ಜಿಲ್ಲೆಯಲ್ಲಿ ಶಿಕ್ಷಣಕ್ಕೆ ಅವಕಾಶಗಳು ಕಡಿಮೆ ಇದ್ದಾಗ ವಚನಪಿತಾಮಹ ಡಾ. ಫ. ಗು. ಹಳಕಟ್ಟಿ, ಬಂಥನಾಳ ಶ್ರೀಗಳು ಶಿಕ್ಷಣ ಸಂಸ್ಥೆಯನ್ನು ಕಟ್ಟಿ ಬೆಳೆಸಿದರು. ಬಿ. ಎಂ. ಪಾಟೀಲರು ಜಿಲ್ಲೆಯಲ್ಲಿ ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕಾಲೇಜುಗಳನ್ನು ಪ್ರಾರಂಭಿಸುವ ಮೂಲಕ ಶಿಕ್ಷಣದ ಜೊತೆಗೆ ವೃತ್ತಿಪರ ಶಿಕ್ಷಣಕ್ಕೆ ಒತ್ತು ನೀಡಿದರು. ಎಂ. ಬಿ. ಪಾಟೀಲ ಅವರು ಈಗ ಶಿಕ್ಷಣ, ಆರೋಗ್ಯ ಮತ್ತು ಎಂಜಿನಿಯರಿಂಗ್ ಶಿಕ್ಷಣಕ್ಕೆ ಆಧುನಿಕ ಸ್ಪರ್ಷ ನೀಡಿದ್ದಾರೆ.

ಬಿ.ಎಲ್.ಡಿ.ಇ ಆಯುರ್ವೇದ ಕಾಲೇಜು ಈಗ ರಾಜ್ಯದ ಅತ್ಯುತ್ತಮ 4ನೇ ಕಾಲೇಜು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಜಪಾನ ಅಟೋಮೊಬೈಲ್ ಕ್ಷೇತ್ರದ ತಜ್ಞರ ತಂಡ ಆಗಷ್ಟ 21 ರಂದು ನಗರಕ್ಕೆ ಆಗಮಿಸುತ್ತಿದ್ದು, ಪಾಟೀಲ ಹೊಂಡಾ ಯಶೋಗಾಥೆ ಕುರಿತು ಮಾಹಿತಿ ಪಡೆಯಲಿದೆ ಎಂದು ಅವರು ತಿಳಿಸಿದರು.

ಎಂ. ಬಿ. ಪಾಟೀಲ ಅವರು ಜಲಸಂಪನ್ಮೂಲ ಸಚಿವರಾಗಿ ಮಾಡಿರುವ ನೀರಾವರಿ ಕೆಲಸಗಳಿಂದಾಗಿ ರೈತರು ಆರ್ಥಿಕವಾಗಿ ಸಬಲರಾಗುತ್ತಿದ್ದಾರೆ. ಬೆಳೆಬಾರದ ಭೂಮಿಯಲ್ಲಿ ಕಬ್ಬು ಬೆಳೆಯಲಾಗುತ್ತಿದೆ. ಇದರಿಂದ ಇಥೆನಾಲ್ ಉತ್ಪಾದಿಸಬಹುದಾಗಿದ್ದು, ಜಿಲ್ಲೆಯಲ್ಲಿ 50 ಹೊಸ ಸಕ್ಕರೆ ಕಾರ್ಖಾನೆಗಳ ಪ್ರಾರಂಭಕ್ಕೆ ಅರ್ಜಿಗಳು ಸಲ್ಲಿಕೆಯಾಗಿವೆ. ಇದು ರೈತರ ಬಾಳು ಹಸನಾಗಲು ನೆರವಾಗಿದೆ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಕ್ಯಾಂಪಸ್ ಸಂದರ್ಶನದಲ್ಲಿ ನಾನಾ ಕಂಪನಿಗಳಲ್ಲಿ ಉದ್ಯೋಗ ಪಡೆದ 14 ವಿದ್ಯಾರ್ಥಿಗಳಿಗೆ ಸುನೀಲಗೌಡ ಪಾಟೀಲ ನೇಮಕಾತಿ ಆದೇಶ ಪತ್ರ ವಿತರಿಸಿ ಶುಭ ಕೋರಿದರು.

ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ರಜಿಸ್ಟ್ರಾರ ಡಾ. ಆರ್. ವಿ. ಕುಲಕರ್ಣಿ, ಆಡಳಿತಾಧಿಕಾರಿ ವಿಲಾಸ ಬಗಲಿ, ಪೋಷಕರ ಪರವಾಗಿ ಅಡಿವೆಪ್ಪ ಸಾಲಗರ ಮಾತನಾಡಿದರು.

ಇದೇ ವೇಳೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಲಕ್ಷ್ಮಣ ಪವಾರ ಸಹಸಂಪಾದಿಸಿರುವ ಫೈನಾನ್ಸಿಯಲ್ ಪ್ಲ್ಯಾನಿಂಗ್ ಮತ್ತು ವೆಲ್ತ್ ಮ್ಯಾನೇಜಮೆಂಟ್ ಪುಸ್ತಕವನ್ನು ಸುನೀಲಗೌಡ ಪಾಟೀಲ ಅವರು ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ಎ.ಎಸ್.ಪಿ. ಕಾಮರ್ಸ್ ಅಟೋನಾಮಸ್ ಕಾಲೇಜಿನ ಪ್ರಾಚಾರ್ಯ ಡಾ. ಎಸ್. ಬಿ. ಕಮತಿ, ವ್ಯವಹಾರ ಅಧ್ಯಯನ ಶಾಸ್ತ್ರ ವಿಭಾಗದ ನಿರ್ದೇಶಕ ಡಾ. ಚಿದಾನಂದ ಬ್ಯಾಹಟ್ಟಿ ಮುಂತಾದವರು ಉಪಸ್ಥಿತರಿದ್ದರು.

ವಿದ್ಯಾರ್ಥಿನಿ ಸನ್ಮಿತಾ ಕುಲಕರ್ಣಿ ಪ್ರಾರ್ಥಿಸಿದರು. ಡಾ. ಮುರುಗೇಶ ಪಟ್ಟಣಶೆಟ್ಟಿ ಪರಿಚಯಿಸಿದರು. ಸಹಾಯಕ ಪ್ರಾಧ್ಯಾಪಕಿ ಡಾ. ಗೌರಿ ಕಲಗೊಂಡ ನಿರೂಪಿಸಿದರು. ಡಾ. ಅಶ್ವಿನಿ ಯರನಾಳ ವಂದಿಸಿದರು.

## ಸೆ.13 ರಂದು ಲೋಕ ಅದಾಲತ್ | ಬೆಳಗಾವಿಯಲ್ಲಿ ಖಾಯಂ ಜನತಾ ನ್ಯಾಯಾಲಯ

# ಜಿಲ್ಲೆಯಾದ್ಯಂತ 90 ದಿನಗಳ ಮಧ್ಯಸ್ಥಿಕೆ ಅಭಿಯಾನ

**ಬಾಗಲಕೋಟೆ :** ಜಿಲ್ಲಾ ಹಾಗೂ ಅಧೀನ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ಇತ್ಯರ್ಥಪಡಿಸಲು ಜಿಲ್ಲೆಯಾದ್ಯಂತ 90 ದಿನಗಳ ವಿಶೇಷ ಮಧ್ಯಸ್ಥಿಕೆ ಅಭಿಯಾನ ಹಮ್ಮಿಕೊಳ್ಳಲಾಗಿದ್ದು, ಜಿಲ್ಲೆಯ ಜನತೆ ಇದರ ಸದುಪಯೋಗ ಪಡೆದುಕೊಳ್ಳುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಎನ್.ವಿ.ವಿಜಯ್ ತಿಳಿಸಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ ಅವರು ಈ ಅಭಿಯಾನ ಜುಲೈ 1 ರಿಂದ ಆರಂಭಗೊಂಡಿದ್ದು, ಇದು 90 ದಿನಗಳ ವರೆಗೆ ರಾಜ್ಯಾದ್ಯಂತ ನಡೆಯುತ್ತಿದೆ. ಈ ಅಭಿಯಾನದಲ್ಲಿ ಬಾಕಿ ಇರುವ ಪ್ರಕರಣಗಳಾದ ವೈವಾಹಿಕ ಹಾಗೂ ಕೌಟುಂಬಿಕ ನ್ಯಾಯಾಲಯದ ಪ್ರಕರಣಗಳು, ಮೋಟಾರು ಅಪಘಾತ, ಚೆಕ್ ಅಮಾನ್ಯ ಪ್ರಕರಣಗಳು, ವಾಣಿಜ್ಯ, ಸೇವಾ ಪ್ರಕರಣಗಳು, ರಾಜೀಯಾಗಬಲ್ಲ ಅಪರಾಧಿಕ ಪ್ರಕರಣಗಳು, ಗ್ರಾಹಕರ ವ್ಯಾಜ್ಯ ಪ್ರಕರಣಗಳು ಡಿ.ಆರ್.ಟಿ, ಪಾಲುದಾರಿಕೆ, ಭೂಸ್ವಾಧೀನ ಪ್ರಕರಣಗಳು ಹಾಗೂ ಇತರೆ ಸಿವಿಲ್ ಪ್ರಕರಣಗಳನ್ನು ಮಧ್ಯಸ್ಥಿಕೆಯ ಮೂಲಕ ಇತ್ಯರ್ಥಪಡಿಸಲಾಗುತ್ತದೆ.

ನ್ಯಾಯಾಲಯದ ಪ್ರಕರಣಗಳನ್ನು ಮಧ್ಯಸ್ಥಿಕೆ ಕೇಂದ್ರಕ್ಕೆ ಸೂಚಿಸಿಕೊಂಡಲ್ಲಿ ಅಂತಹ ಪ್ರಕರಣಗಳಲ್ಲಿ ಉಭಯ ಪಕ್ಷಗಾರರನ್ನು ಕರೆದುಕೊಂಡು ಜಿಲ್ಲಾ ನ್ಯಾಯಾಲಯದ ಸಮುಚ್ಚಯದಲ್ಲಿರುವ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳ ಹಾಗೂ ತಾಲೂಕು ನ್ಯಾಯಾಲಯಗಳ ಆವರಣಗಳಲ್ಲಿರುವ ಮಧ್ಯಸ್ಥಿಕೆ ಕೇಂದ್ರಗಳಲ್ಲಿ ರಾಜೀ ಸಂಧಾನ ಮೂಲಕ ಪ್ರಕರಣಗಳನ್ನು ಇತ್ಯರ್ಥ ಪಡಿಸಿಕೊಳ್ಳಬಹುದಾಗಿದೆ. ಸಾರ್ವಜನಿಕರು ತಮ್ಮ ಪ್ರಕರಣಗಳು ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇದ್ದಲ್ಲಿ ಬೆಂಗಳೂರು, ಧಾರವಾಡ ಮತ್ತು ಕಲಬುರಗಿ ಉಚ್ಚ ನ್ಯಾಯಾಲಯಗಳ ಆವರಣಗಳಲ್ಲಿರುವ ಮಧ್ಯಸ್ಥಿಕೆ ಕೇಂದ್ರಗ ಳನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿದೆ ಎಂದು ತಿಳಿಸಿದ್ದಾರೆ.

# 354 ನೇ ರಾಘವೇಂದ್ರ ಸ್ವಾಮಿಗಳ ಆರಾಧನೆ ಸಂಪನ್ನ: ಅದ್ದೂರಿ ರಥೋತ್ಸವ



**ಅಥಣಿ :** ಶ್ರೀ ರಾಘವೇಂದ್ರ ಸ್ವಾಮಿಗಳ 354 ನೇ ಆರಾಧನೆಯ ಕೊನೆಯ ದಿನದ ಅಂಗವಾಗಿ ಸಾವಿರಾರು ಭಕ್ತರ ಜಯ ಘೋಷ, ಭಕ್ತಿ ಗೀತೆಗಳ, ಭಜನೆ, ದಾಸರ ಪದಗಳ, ನಡುವೆ ರಥೋತ್ಸವ ವಿಜ್ರಂಭಣೆಯಿಂದ ನಡೆಯಿತು. ಮೂರು ದಿನಗಳ ಆರಾಧನಾ ಮಹೋತ್ಸವವು

ವಿಜ್ರಂಭಣೆಯ ರಥೋತ್ಸವದ ಮೂಲಕ ಕೊನೆಗೊಂಡಿತು.ಕೇದಿಗೆ,ಸೇವಂತಿ,ಮಲ್ಲಿಗೆ,ಗುಲಾಬಿ, ಕನಕಾಂಬರ, ಜಾಜಿ ಸೇರಿದಂತೆ ಅನೇಕ ವಿಧವಾದ ಹೂಗಳು, ಬಾಳೆಯ ದಿಂಡು, ತೆಂಗಿನ ಗರಿಗಳಿಂದ ಅಲಂಕೃತಗೊಂಡಿದ್ದ ರಥ ಭಕ್ತರ ಮನಸೂರೆ ಗೊಂಡಿತ್ತು. ಹೋಮ ಹವನಾದಿ, ಪೂರ್ಣಾಹುತಿ ನೀಡಿದ ನಂತರ ಪ್ರಾರಂಭಗೊಂಡ ರಥೋತ್ಸವ ತರುಣ ಭಕ್ತರ ಉತ್ಸಾಹ ಇಮ್ಮಡಿಗೊಳಿಸಿತ್ತು. ರಥಕ್ಕೆ ಟೆಂಗಿನ ಕಾಯಿ ಒಡೆದು ಉತ್ತತ್ತಿ, ಹಣ್ಣುಗಳನ್ನು ಅರ್ಪಿಸುತ್ತಿರುವುದು ಸಾಮಾನ್ಯವಾಗಿತ್ತು. ಪ್ರಮುಖವಾಗಿ ರಥೋತ್ಸವದಲ್ಲಿ ಪಾಲ್ಗೊಳ್ಳಲು ಮಹಾರಾಷ್ಟ್ರದ ಮುಂಬೈ, ಪುಣೆ, ಕೊಲ್ಲಾಪೂರ, ರಾಜ್ಯದ ಬೆಂಗಳೂರು, ವಿಜಯಪುರ, ಧಾರವಾಡ, ಹುಬ್ಬಳ್ಳಿ, ಸೇರಿದಂತೆ ಅನೇಕ ಪ್ರಮುಖ ಸ್ಥಳಗಳಿಂದ ಭಕ್ತರ ದಂಡು ಕೊನೆಯ ದಿನದ ಉತ್ಸವದಲ್ಲಿ ಪಾಲ್ಗೊಳ್ಳುವ ಮೂಲಕ ರಾಯರ ಕೃಪೆಗೆ ಪಾತ್ರರಾದರು ರಥೋತ್ಸವ ಪ್ರಾರಂಭವಾಗುತ್ತಿದ್ದಂತೆಯೇ ತರುಣ ಭಕ್ತರಿಂದ ವಾಸುದೇವ ಹರಿ ಎನ್ನುವ ಘೋಷಣೆ ಮುಗಿಲು ಮುಟ್ಟುವಂತಿತ್ತು. ಶ್ರೀ ವಿಷ್ಣುತೀರ್ಥ ಭಜನಾ ಮಂಡಳ, ಶ್ರೀ ಸುಧಾ ಭಜನಾ ಮಂಡಳದ ಸದಸ್ಯೆಯರು. ಮಾತೆಯರು, ತರುಣ ಭಕ್ತರು ಸೇರಿದಂತೆಚಿಕ್ಕಮಕ್ಕಳಿಂದಕೋಲಾಟ,ಘುಗಡಿಯಾಟ ಆಕರ್ಷಣೀಯವಾಗಿತ್ತು. ತರುಣ ಭಕ್ತರಿಂದ ಬಾರೋ ರಾಘವೇಂದ್ರಾ, ಊರಿಗೆ ಬಂದರೆ ರಾಘವೇಂದ್ರ ನಮ್ಮ ಕೇರಿಗೂ ಬಾ ರಾಘವೇಂದ್ರ, ಅಥಣಿಯೇ ಇಂದೆಮಗೆ ಮಂತ್ರಾಲಯ ಹೀಗೆ ಹತ್ತಾರು ಭಕ್ತಿ ಗೀತೆಗಳನ್ನು ಹಾಡಿ ಗಾಯನ ಸೇವೆ ಸಲ್ಲಿಸಿದರು.

ರಥೋತ್ಸವದ ನಂತರ ಸಾವಿರಾರು ಭಕ್ತರಿಗೆ ಅನ್ನಪ್ರಸಾದ

ನಡೆಯಿತು ವಿತರಣೆಗೆ ನೂರಾರು ತರುಣ ಭಕ್ತರು ಟೊಂಕ ಕಟ್ಟಿ ನಿಂತಿದ್ದರು. ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಮೂರು ದಿನಗಳ ಆರಾಧನಾ ಮಹೋತ್ಸವದ ಮೂರು ದಿನಗಳಲ್ಲಿ ಯಾವುದೇ ಭೇದ ಭಾವ ಇಲ್ಲದ ಸಾವಿರಾರು ಭಕ್ತರು ಪ್ರಸಾದ ಸ್ವೀಕರಿಸಿ ಧನ್ಯರಾದರು. ಉತ್ಸವ ಸಮಿತಿ, ವಿಶ್ವಸ್ಥ ಮಂಡಳಿ ಪದಾಧಿಕಾರಿಗಳು ಸೇರಿದಂತೆ ಭಕ್ತರು ಉತ್ಸಾಹದಿಂದ ಪಾಲ್ಗೊಂಡಿದ್ದರು.

# ಕ್ಲಸ್ಟರ್ ಮಟ್ಟದ ಪ್ರೌಢಶಾಲಾ ಕ್ರೀಡಾಕೂಟ: ಶಾರದಾ ಅಲ್ಪಸಂಖ್ಯಾತರ ಶಾಲೆಯ ಮಕ್ಕಳು ಉತ್ತಮ ಸಾಧನೆ

**ಅಥಣಿ :** ಶಾಲಾ ಶಿಕ್ಷಣ ಇಲಾಖೆಯ ಪ್ರಸಕ್ತ ಶೈಕ್ಷಣಿಕ ವರ್ಷದ ಅಥಣಿ ತಾಲೂಕಿನ ದರೂರ ಕ್ಲಸ್ಟರ್ ಮಟ್ಟದ ಪ್ರೌಢಶಾಲೆಗಳ ಕ್ರೀಡಾಕೂಟವನ್ನು ದರೂರ ಗ್ರಾಮದ ಸರಕಾರಿ ಪ್ರೌಢಶಾಲೆ ಆವರಣದಲ್ಲಿ ಜರುಗಿದವು.

ಈ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದ ತಾಲೂಕಿನ ಸಪ್ತಸಾಗರ ಗ್ರಾಮದ ಶಾರದಾ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಯ ಪ್ರೌಢಶಾಲಾ ವಿಭಾಗದ ಮಕ್ಕಳು ಭಾಗವಹಿಸಿ ಅದ್ಭುತ ಸಾಧನೆ ಮಾಡಿದ್ದಾರೆ.



ಗುಂಪು ಕ್ರೀಡಾಕೂಟ : ಗುಂಪು ಆಟಗಳಾದ ಬಾಲಕರ ಕಬಡ್ಡಿ ತಂಡ ಪ್ರಥಮ ಸ್ಥಾನ ಮತ್ತು 400 ಮೀಟರ್ ರಿಲೆಯಲ್ಲಿ ಪ್ರಥಮ ಸ್ಥಾನ ಹಾಗೂ ಬಾಲಕಿಯರ ಥ್ರೋಬಾಲ್ ತಂಡ ಪ್ರಥಮ ಸ್ಥಾನವನ್ನು ಪಡೆದು ತಾಲೂಕ ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ.

ವೈಯಕ್ತಿಕ ಕ್ರೀಡಾಕೂಟ : ವೈಯಕ್ತಿಕ ಪಂದ್ಯಗಳಲ್ಲಿ ಭಾಗ್ಯಶ್ರೀ ಸುರೇಶ ಆಲಗೂರ 400 ಮೀಟರ್ ಓಟದಲ್ಲಿ ಪ್ರಥಮ ಸ್ಥಾನ ಹಾಗೂ ಚಕ್ರ ಎಸೆತದಲ್ಲಿ ಪ್ರಥಮ ಸ್ಥಾನ, ಗುಂಡು ಎಸೆತದಲ್ಲಿ ದ್ವಿತೀಯ ಸ್ಥಾನ ಹಾಗೂ ನಾಗರಾಜ ಕಲ್ಲಪ್ಪಾ ದುರದುಂಡಿ ಚಕ್ರ ಎಸೆತದಲ್ಲಿ ಪ್ರಥಮ ಸ್ಥಾನ ಮತ್ತು ಗುಂಡು ಎಸೆತದಲ್ಲಿ ದ್ವಿತೀಯ ಸ್ಥಾನ ಹಾಗೂ ಪ್ರೀತಿ ಬಾಹುಬಲಿ ಠಗರಿ 200 ಮೀಟರ್ ಓಟದಲ್ಲಿ ಪ್ರಥಮ ಸ್ಥಾನ ಹಾಗೂ ಗುಂಡು ಎಸೆತದಲ್ಲಿ ತೃತೀಯ ಸ್ಥಾನ, ಅಶ್ವಥ ಮಲ್ಲಪ್ಪಾ ತೇಲಿ 200 ಮೀಟರ್ ಓಟದಲ್ಲಿ ಪ್ರಥಮ ಸ್ಥಾನ, ಸಮೀರ ಹಸನ ನದಾಫ 100 ಮೀಟರ್ ಓಟದಲ್ಲಿ ದ್ವಿತೀಯ ಸ್ಥಾನ, ಮಂಜುನಾಥ ರಾವಸಾಬ ಹವಾಲ್ದಾರ 200 ಮೀಟರ್ ಓಟದಲ್ಲಿ ದ್ವಿತೀಯಸ್ಥಾನ,ಮತ್ತುಪ್ರತೀಕ್ಷಾರವಿಕಾಂಬಳೆ ಚಕ್ರ ಎಸೆತದಲ್ಲಿ ದ್ವಿತೀಯ ಸ್ಥಾನವನ್ನು ಪಡೆದು ತಾಲೂಕಾ ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿ ಸಪ್ತಸಾಗರ ಗ್ರಾಮಕ್ಕೆ ಹಾಗೂ ಶಿಕ್ಷಣ ಸಂಸ್ಥೆಗೆ ಕೀರ್ತಿ ತಂದಿದ್ದಾರೆ. ದೈಹಿಕ ಶಿಕ್ಷಣ ಶಿಕ್ಷಕರಾದ ಪ್ರಶಾಂತ ಹಳ್ಳೂರ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಉತ್ತಮ ಕ್ರೀಡಾ ತರಬೇತಿ ಹಾಗೂ ಮಾರ್ಗದರ್ಶನ ನೀಡಿದ್ದರು.

ಈ ಶಾಲೆಗೆ ಕ್ರೀಡಾಪಟುಗಳ ಮೇಲ್ವಿಚಾರಕರಾಗಿ ಮಹಮ್ಮದ ನದಾಫ ಹಾಗೂ ಪೂಜಾ ಮಠಪತಿ ಕಾರ್ಯನಿರ್ವಹಿಸಿದರು. ಕ್ರೀಡಾಕೂಟದಲ್ಲಿ ಉತ್ತಮ ಸಾಧನೆ ಮಾಡಿ ಶಾಲೆಯ ಕೀರ್ತಿಯನ್ನು ಹೆಚ್ಚಿಸಿದ ವಿದ್ಯಾರ್ಥಿಗಳಿಗೆ, ದೈಹಿಕ ಶಿಕ್ಷಕರಿಗೆ, ಮುಖ್ಯೋಪಾಧ್ಯಾಯರು ಸೇರಿದಂತೆ ಶಿಕ್ಷಕ ವೃಂದದವರಿಗೆ ಸಂಸ್ಥೆಯ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿಯ ಸರ್ವ ಸದಸ್ಯರು ಹಾಗೂ ಗ್ರಾಮಸ್ಥರು ಅಭಿನಂದಿಸಿದ್ದಾರೆ.

# ತಾಲೂಕಿನ ನಾಲ್ಕು ಗ್ರಾಮೀಣ ಶಾಲೆಗಳು ಉನ್ನತೀಕರಣಕ್ಕೆ

**ಮುಧೋಳ :** ತಾಲೂಕಿನ ಗ್ರಾಮೀಣ ಭಾಗದ ಜನತೆಯ ಬಹು ದಿನದ ಬೇಡಿಕೆಯಾದ ನಾಲ್ಕು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಪ್ರೌಢ ಶಾಲೆಗಳನ್ನಾಗಿ ಉನ್ನತೀಕ–ರಿಸಲಾಗಿದೆ ಎಂದು ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್. ಬಿ. ತಿಮ್ಮಾಪೂರ ತಿಳಿಸಿದ್ದಾರೆ.



ಪತ್ರಿಕೆಯೊಂದಿಗೆ ಮಾತನಾಡಿದ ಅವರು, ಇದರಿಂದ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ವಿಶೇಷವಾಗಿ ವಿದ್ಯಾರ್ಥಿನಿಯರಿಗೆ ಹೆಚ್ಚಿನ ಶಿಕ್ಷಣ ಕಲಿಯಲು ಅನುಕೂಲವಾಗುವುದೆಂದು ತಿಳಿಸಿದ್ದಾರೆ.

ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ನಿಂಗಾಪೂರ, ಲೋಕಾಪೂರ, ಮೆಳ್ಳಿಗೇರಿ, ಹಾಗೂ ಲೋಕಾಪೂರದ ಉರ್ದು ಹೆಣ್ಣು ಮಕ್ಕಳ ಶಾಲೆ ಸೇರಿದಂತೆ ನಾಲ್ಕು ಪ್ರಾಥಮಿಕ ಹಿರಿಯ ಶಾಲೆಗಳನ್ನು ಪ್ರೌಢ ಶಾಲೆಗಳನ್ನಾಗಿ ಉನ್ನತೀಕ–ರಿಸಲಾಗಿದೆ ಎಂದು ತಿಮ್ಮಾಪೂರ ತಿಳಿಸಿದ್ದಾರೆ.

ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಪ್ರೌಢ ಶಾಲೆಗಳನ್ನಾಗಿ ಉನ್ನತೀಕರಿಸಿದ ಸಚಿವ ತಿಮ್ಮಾಪೂರ ಅವರನ್ನು ಪಕ್ಷದ ಅಧ್ಯಕ್ಷ ಅಶೋಕ ಕಿವಡಿ, ಸದುಗೌಡ ಪಾಟೀಲ, ಶಿವಾನಂದ ಉದಪುಡಿ, ಪರಮಾನಂದ ಕುಟರಟ್ಟಿ ಹಾಗೂ ಗ್ರಾಮಸ್ಥರು ಅಭಿನಂದಿಸಿದ್ದಾರೆ.

# ದೇಶದ ಭವಿಷ್ಯ ಇಂದಿನ ಯುವಶಕ್ತಿಯ ಕೈಯಲ್ಲಿದೆ : ಶ್ರೀಹರಿ

**ಅಥಣಿ :** ಇಲ್ಲಿನ ಕೆ.ಎಲ್.ಇ ಸಂಸ್ಥೆಯ ಎಸ್.ಎಸ್.ಎಮ್.ಎಸ್ ಮಹಾವಿದ್ಯಾಲಯದಲ್ಲಿ ಆಂತರಿಕ ಗುಣಮಟ್ಟ ಭರವಸೆ ಕೋಶದಡಿಯಲ್ಲಿ ಪ್ರಸಕ್ತ ಸಾಲಿನ ಪ್ರಥಮ ವರ್ಷದ ಪದವಿ ವಿದ್ಯಾರ್ಥಿಗಳ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಜರುಗಿದವು.



ಈ ಕಾರ್ಯಕ್ರಮವನ್ನು ಉದ್ಘಾಟಿಸಿದ ಕೋಲಾರದ ಬೆಳಕು ಸಂಸ್ಥೆಯ ಅಧ್ಯಕ್ಷ ಶ್ರೀಹರಿ ಮಾತನಾಡಿ ದೇಶ ಬದಲಾಯಿಸುವ ಶಕ್ತಿ ಇಂದಿನ ಯುವ ಪೀಳಿಗೆಯಲ್ಲಿದೆ ವಿದ್ಯಾರ್ಥಿಗಳು ಕಠಿಣ ಪರಿಶ್ರಮ ಮತ್ತು ನಿರಂತರ ಓದಿನಿಂದ ಮಾತ್ರ ಯಶಸ್ಸು ಸಾಧ್ಯ ಎನ್ನುತ್ತ ಇಂದಿನ ಯುವಜನತೆ ಮೊಬೈಲಗೆ ಸೀಮಿತವಾಗಿದ್ದು ಸಮಾಜದಲ್ಲಿನ ವಿಚಾರಗಳನ್ನು ಅರಿಯದೆ ಜೀವನದ ನಿರ್ವಹಣೆ ಕಷ್ಟಸಾಧ್ಯವಾಗಿ ವಿಚಲಿತರಾಗುತ್ತಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸ್ಥಾನಿಕ ಆಡಳಿತ ಮಂಡಳಿಯ ಸದ್ಯಸ್ಯ ಶಂಭುಲಿಂಗ ಮುಮದಾಪುರ ಮಾತನಾಡಿ ವಿದ್ಯಾರ್ಥಿಗಳು ಜೀವನದಲ್ಲಿ ಶಿಸ್ತನ್ನು ರೂಢಿಸಿಕೊಳ್ಳಬೇಕು. ವಿದ್ಯಾರ್ಥಿಗಳಲ್ಲಿ ಸಾಧಿಸುವ ಛಲವಿದ್ದಾಗ ಮಾತ್ರ ಯಶಸ್ಸು ಲಭಿಸುತ್ತದೆ ಉತ್ತಮ ಸ್ನೇಹ ಗಳಿಸಿಕೊಂಡು ಶೈಕ್ಷಣಿಕ ಪ್ರಗತಿ ಸಾಧಿಸಿದರೆ ಉತ್ತಮ ಜೀವನ ರೂಪಿಸಿಕೊಳ್ಳಲು ಸಾಧ್ಯ ಎಂದರು.

ಇದೇ ಸಂದರ್ಭದಲ್ಲಿ ಪ್ರಸ್ತುತ ವರ್ಷದಿಂದ ಮಹಾವಿದ್ಯಾಲಯದ ಪದವಿ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ತರಬೇತಿ ಶಿಬಿರವನ್ನು ನಡೆಸಲು ವಿದ್ವತಪೂರ್ಣ ಚಾಲನೆ ನೀಡಲಾಯಿತು.

ದ್ವಿತಿಯ ಪಿ.ಯು.ಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ನಮ್ಮ ಮಹಾವಿದ್ಯಾಲಯದಲ್ಲಿ ಪ್ರವೇಶ ಪಡೆದವಿದ್ಯಾರ್ಥಿಗಳಿಗೆಕೆ.ಎಲ್.ಇ ಸಂಸ್ಥೆಯಿಂದ ಕೊಡುವಂತ ಶಿಷ್ಯ ವೇತನಕ್ಕೆ 37 ವಿದ್ಯಾರ್ಥಿಗಳಿಗೆ 85 ಸಾವಿರದ 6 ರೂಪಾಯಿಗಳ ಚೆಕ್‌ಗಳನ್ನು ಇದೇ ಸಂದರ್ಭದಲ್ಲಿ ವಿತರಿಸಲಾಯಿತು. ಪ್ರಾಚಾರ್ಯ ಡಾ.ಪ್ರಶಾಂತ ಮಗದುಮ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾಲೇಜು ಒಕ್ಕೂಟದ ಕಾರ್ಯಾಧ್ಯಕ್ಷ ಡಾ.ಭಾರತಿ ಎಸ್ ಗದ್ದಿ ಅತಿಥಿಗಳನ್ನು ಪರಿಚಯಿಸಿದರು. ಸಂಯೋಜಕ ಇಮ್ರಾನಮುಲ್ಲಾ,ಕ್ರಾಂತಿಅಕಾಡೆಮಿ ಸಂಸ್ಥಾಪಕ ಅನಿಲ ಸೊನ್ನದ ಉಪಸ್ಥಿತರಿದ್ದರು. ಸೌಮ್ಯಶ್ರೀ ದೇಶಿಂಗೆ ನಿರೂಪಿಸಿದರು. ಕ್ರೀಡಾ ಸಂಯೋಜಕ ಡಾ.ಜಯಣ್ಣ ಎನ್ ಡಿ ವಂದಿಸಿದರು.

## ಶಾಂತಿ ಸೌಹಾರ್ದತೆಯಿಂದ ಹಬ್ಬಗಳನ್ನು ಆಚರಿಸಿ: ಡಿವೈಎಸ್ಪಿ ಎಸ್. ರೋಷನ್ ಜಮೀರ

# ಗಣೇಶೋತ್ಸವ ಒಂದೇ ಸೂರಿನಡಿಯಲ್ಲಿ ಎಲ್ಲ ಪರವಾನಿಗೆಗಳು

**ರಬಕವಿ-ಬನಹಟ್ಟಿ :** ಸರಕಾರದ ನಿರ್ದೇಶನಗಳನ್ನು ಪಾಲಿಸಿ, ಶಾಂತಿ ಸೌಹಾರ್ದತೆಯಿಂದ ಹಬ್ಬಗಳನ್ನು ಆಚರಿಸಿ ಎಂದು ಜಮಖಂಡಿ ವಿಭಾಗದ ಡಿವೈ–ಎಸ್ಪಿ ಎಸ್. ರೋಷನ್ ಜಮೀರ ಹೇಳಿದರು.




ಅವರು ಗುರುವಾರ ಮಧ್ಯಾಹ್ನ ಬನಹಟ್ಟಿಯ ಪೊಲೀಸ್ ಠಾಣೆಯಲ್ಲಿ ಗಣೇಶೋತ್ಸವ ಹಾಗೂ ಈದ ಮಿಲಾದ ನಿಮಿತ್ಯ ನಡೆದ ಶಾಂತಿ ಪಾಲನಾ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದರು.

ಗಣೇಶೋತ್ಸವಕ್ಕೆ ಒಂದೇ ಸೂರಿನ ಅಡಿಯಲ್ಲಿ ವಿವಿಧ ಇಲಾಖೆಗಳ ಪರವಾನಿಗೆಗಳನ್ನು ನೀಡುವ ವ್ಯವಸ್ಥೆಯನ್ನು ಮಾಡಲಾಗುವುದು. ಗಣೇಶ ಮಂಡಳಿಯವರು ಸರ್ಕಾರದ ಮಾರ್ಗ ಸೂಚಿಗಳಂತೆ ಹಬ್ಬವನ್ನು ಆಚರಣೆ ಮಾಡಬೇಕು.

ಮೆರವಣಿಗೆಯ ಸಂದರ್ಭದಲ್ಲಿ ಮಹಿಳೆಯರಿಗೆ, ಹಿರಿಯ–ರಿಗೆ ಸೇರಿದಂತೆ ಮತ್ತೊಬ್ಬ–ರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು ಕಾನೂನು ಮತ್ತು ಸುವ್ಯವಸ್ಥೆಗೆ ಯಾವುದೆ ತೊಂದರೆಯಾಗದಂತೆಹಬ್ಬವನ್ನು ಆಚರಿಸಿ ಎಂದರು. ಯಾವುದೇಅವಘಡಜರುಗದಂತೆ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕು. ಸಾರ್ವಜನಿಕರಿಗೆ ನಮ್ಮ ಇಲಾಖೆ ಸಹಕಾರ ಅಗತ್ಯವಾಗಿದೆ. ಯಾವುದೇ ಹಬ್ಬ ಶಾಂತಿಯುತವಾಗಿ ನಡೆಯಬೇಕು. ನಮ್ಮ ದೇಶ ಭಾವೈಕ್ಯತೆಯಿಂದ ಕೂಡಿದೆ. ನಮ್ಮದು ವೈವಿಧ್ಯತೆಯಲ್ಲಿ ಏಕತೆಯನ್ನುಹೊಂದಿರುವರಾಷ್ಟ್ರ. ಸಾಮಾಜಿಕ ಜಾಲತಾಣಗಳಲ್ಲಿ ಕೋಮು ಭಾವನೆ ಉಂಟು ಮಾಡಬಾರದು. ಅಂತಹ ಘಟನೆಗಳು ಕಂಡು ಬಂದಲ್ಲಿ ಅಂತಹವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು. ಪ್ರಮುಖ ಸ್ಥಳಗಳಲ್ಲಿ ಸಿ.ಸಿ. ಕ್ಯಾಮರಾ ಅಳವಡಿಸಲಾಗುವುದು. ನಮ್ಮ ಪೊಲೀಸ್ ಸಿಬ್ಬಂದಿ ವರ್ಗದವರನ್ನು ನೇಮಿಸಲಾಗುವುದು ಎಂದು ಡಿವೈಎಸ್ಪಿ ಎಸ್. ರೋಷನ್ ಜಮೀರ ಹೇಳಿದರು.

ರಬಕವಿ-ಬನಹಟ್ಟಿ ತಹಶೀಲ್ದಾರ ಗಿರೀಶ ಸ್ವಾದಿ ಮಾತನಾಡಿ, ಪಿಓಪಿ ಗಣಪತಿಗಳನ್ನುನಿಷೇಧಿಸಲಾಗಿದೆ. ಆ ಕುರಿತು ಜಾಗೃತರಾಗಿರಿ. ಪರಿಸರ ಸ್ನೇಹಿ ಗಣಪತಿಗಳನ್ನು ಬಳಸಿ ಎಂದರು.

ಕಾರ್ಯಕ್ರಮದಲ್ಲಿ ಬನಹಟ್ಟಿ ವೃತ್ತದ ಸಿಪಿಐ ಸಂಜೀವ ಬಳಿಗಾರ ಮಾತನಾಡಿ, ಭಾರತೀಯ ಪರಂಪರೆಯಲ್ಲಿ ಹಬ್ಬಗಳನ್ನು ಅರ್ಥಪೂರ್ಣವಾಗಿ ಆಚ–ರಿಸಲಾಗುತ್ತಿದೆ. ಶಾಂತ ರೀತಿಯಿಂದ ಹಬ್ಬ ಆಚರಿಸಿ. ಗಣೇಶ ಕೂಡ್ರಿಸುವಲ್ಲಿ ಅನುಮತಿ ಕಡ್ಡಾಯ. ಸರಿಯಾದ ಮಾಹಿತಿ ನೀಡಿ ಪೊಲೀಸ್ ಇಲಾಖೆಗೆ ಸಹಕರಿಸಿ. ವಿಸರ್ಜನೆ ವೇಳೆ ಕರ್ಕಶ ಹಾಗು ಡಾಲ್ಬಿಗಳಂತಹ ಧ್ವನಿವರ್ಧಕಗಳಿಂದ ದೂರವಿದ್ದು, ದೇಶೀವಾದ್ಯಗಳನ್ನುಬಳಸುವದ–ರಿಂದ ಉತ್ಸವಕ್ಕೆ ಮತ್ತಷ್ಟು ಮೆರಗು ಬರಲಿದೆ. ಪರಿಸರ ಸ್ನೇಹಿ ಗಣಪತಿಗಳನ್ನು ಬಳಸಿ ಎಂದರು.

ಶಾಂತಿ ಸಭೆಯಲ್ಲಿ ಪಿಎಸ್‌ಐ ಶಾಂತಾ ಹಳ್ಳಿ, ಪೌರಾಯುಕ್ತ ರಮೇಶ ಜಾಧವ, ಅಗ್ನಿ ಶಾಮಕ ದಳದ ಅಧಿಕಾರಿ ರಮೇಶ ಚೌಗಲೆ, ಹೆಸ್ಕಾಂ ಮುಖ್ಯಾಧಿಕಾರಿ ದಯಾನಂದ ಮುಳ್ಳೂರ, ಮಲ್ಲಿಕಾರ್ಜುನ ತುಂಗಳ, ಶಿವಾನಂದ ಗಾಯಕವಾಡ, ಅಕ್ಬರ ತಾಂಬೋಳಿ ಎಂ. ಎಂ. ಹೊಸಮನಿ ಮಾತನಾಡಿದರು.

ಸಭೆಯಲ್ಲಿ ಅಶೋಕ ರಾವಳ, ಶಿವಾನಂದ ಗಾಯಕವಾಡ, ಮಲ್ಲಪ್ಪ ಹೊಸಮನಿ, ಈಶ್ವರ ಕಾಡದೇವರ, ಓಂಪ್ರಕಾಶ ಮನಗೂಳಿ, ಮಧು ಹಳಿಂಗಳಿ, ಆನಂದ ಕೋಲೂರ, ವಿಜಯ ಕಲಾಲ, ಶ್ರೀಶೈಲ ಆಲಗೂರ, ಹಾರುನ್ ಬೇವೂರ, ಧರೆಪ್ಪ ಕುಂಬಾರ, ಬಾಬುರಾವ ಕಮತಗಿ, ಬುಡನ ಜಮಾದಾರ, ಶಂಕರ ಆಲಕನೂರ, ಕಿರಣ ಆಳಗಿ, ಶೋಭಾ ಹೊಸಮನಿ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ಜಮೀನಿಗೆ ತೆರಳುವ ರಸ್ತೆ ಅಭಿವೃದ್ಧಿಗೆ ರಾಜ್ಯ ರೈತ ಸಂಘ ಹಸಿರು ಸೇನೆ ಆಗ್ರಹ

**ಸೇಡಂ :** ತಾಲೂಕಿನ ಮೇದಕ ಗ್ರಾಮದಲ್ಲಿರುವ ಸುಮಾರು 500 ಎಕರೆ ಜಮೀನಿಗೆ ತೆರಳುವ ಕಚ್ಚಾ ರಸ್ತೆ ಇದ್ದು ಈ ರಸ್ತೆ ಅಭಿವೃದ್ಧಿ ಮಾಡುವಂತೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಕಾರ್ಯಕರ್ತರು ಆ ಸ್ಥಳಕ್ಕೆ ಭೇಟಿ ನೀಡಿ ಮಾಧ್ಯಮದರೊಂದಿಗೆ ಮಾತನಾಡಿದ ಅವರು ಈ ರಸ್ತೆ ಮೂಲಕ ರೈತರು ಮತ್ತು ಕೂಲಿ ಕಾರ್ಮಿಕರು ಎತ್ತುಗಳು ಹೋಗುವ ದಾರಿ ಮುಖ್ಯ ದಾರಿಯಾಗಿದ್ದು ಮಳೆ ನೀರಿನಿಂದ ಕೊಚ್ಚಿಹೋಗಿದೆ,ಮಾನ್ಯ ತಾಲೂಕಿನ ಶಾಸಕರು ಸಚಿವರಾದ ಸನ್ಮಾನ್ಯ ಡಾ. ಶರಣಪ್ರಕಾಶ್ ಪಾಟೀಲ್ ಅವರು ಸಂಬಂಧಪಟ್ಟ ಅಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿ ಶೀಘ್ರದಲ್ಲೇ ಈ ರಸ್ತೆ ಸುಧಾರಿಸಬೇಕಾಗಿ ವಿನಂತಿಸಿದ್ದಾರೆ. ಒಂದು ವೇಳೆ ವಿಳಂಬ ಮಾಡಿದರೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಪ್ರತಿಭಟನೆ ಮತ್ತು ಉಗ್ರ ಹೋರಾಟ ಮಾಡುತ್ತೇವೆ ಎಂದು ಎಚ್ಚರಿಸಿದ್ದಾರೆ. ಈ ವೇಳೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ತಾಲೂಕು



ಉಪಾಧ್ಯಕ್ಷ ಇಮ್ರಾನ್ ಶೇಕ್,ತಾಲೂಕು ಕಾರ್ಯಾಧ್ಯಕ್ಷ ಸಾವಪ್ಪ ಬಗಲ್, ಮುಧೋಳ್ ಹೋಬಳಿ ಉಪಾಧ್ಯಕ್ಷ ಕಾಶಪ್ಪ ಮೆದಕ್, ಮೆದಕ್ ಗ್ರಾಮ ಘಟಕದ ಅಧ್ಯಕ್ಷ ಕೇಶವ್, ರೈತ ಮಾಣಿಕ್ಯಪ್ಪ ನಾಕಿನಿ, ಬಸಪ್ಪ ಕಿನ್ತಂಕಿ, ಮೈಪಾಲ್ ಮಾಲೆ, ಸಣ್ಣಪ್ಪ,ಶರಣಪ್ಪ ಬ್ಯಾಗರಿ. ಕಿಷ್ಟಪ್ಪ ಜೋಗಿ,ಚಂದ್ರಪ್ಪ ಬ್ಯಾಗರಿ, ಚಿನ್ನಯ, ಕೃಷ್ಣಪ್ಪ ಪಾಕಲ್, ಹನಮಂತ ಗುದ್ದೆ, ಸೇರಿದಂತೆ ಹಲವಾರು ರೈತರು ಇದ್ದರು.

# ಕೃಷ್ಣ ಮಂದಿರದಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಮಹೋತ್ಸವ



**ಕಲಬುರಗಿ :** ವಿದ್ಯಾನಗರ ಬಡಾವಣೆಯ ಶ್ರೀ ಕೃಷ್ಣ ಮಂದಿರ ಹಾಗೂ ಹನುಮ ಭೀಮ ಮಧುರ ದೇವಸ್ಥಾನದಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ನಿಮಿತ್ಯ ವಿಶೇಷ ಪಾರಾಯಣ ಹಮ್ಮಿಕೊಳ್ಳಲಾಗಿತ್ತು.

ಶ್ರೀ ಲಕ್ಷ್ಮೀನಾರಾಯಣ, ಶ್ರೀ ಹಂಸ ನಾಮಕ, ಹರೇ ಶ್ರೀ ರಾಮ, ಶ್ರೀ ಜೈ ವೀರ ಹನುಮಾನ್, ಶ್ರೀ ಸತ್ಯ ಪ್ರಮೋದ ತೀರ್ಥ ಕೃಪಾಪೊ?ಷಿತ ಪಾರಾಯಣ ಸಂಘ, ಗೀತಾ ಪಾರಾಯಣ ಸಂಘಗಳ ವತಿಯಿಂದ ವೆಂಕಟೇಶ ಸ್ತೋತ್ರ, ಶ್ರೀಮದ್ಭಗವದ್ಗೀತಾ, ಗೋಪಿಗೀತಮ್ ಪಾರಾಯಣ ಮಾಡಲಾಯಿತು.

ಪ್ರಮುಖರಾದ ಡಾ. ಗೌತಮ್ ಜಹಾಗೀರದಾರ, ಕಿಶೋರ್ ದೇಶಪಾಂಡೆ, ಅನಿಲ್ ಕುಲಕರ್ಣಿ, ವಿನುತ ಜೋಶಿ, ವಿಶ್ವನಾಥ್ ಕುಲಕರ್ಣಿ, ರಾಮಾಚಾರ್ಯ ನಗನೂರು, ಡಾ. ಶ್ರೀನಿವಾಸ್ ಜಹಾಗೀರದಾರ, ಜಗನ್ನಾಥಾಚಾರ್ಯ ಸಗರ್, ಶಂಕರರಾವ್ ಸಿಂದಗಿಕರ್, ವಿಜಯಕುಮಾರ್ ಕುಲಕರ್ಣಿ, ಭೀಮಸೇನ್ ದೇಶಪಾಂಡೆ, ರವೀಂದ್ರ ದೇಶಪಾಂಡೆ, ವೆಂಕಟೇಶಜೋಶಿ,ಪ್ರವೀಣ್‌ಓಂಕಾರ್.ರಾಮದಾಸ್, ಸಮೀರ್ ಕುಲಕರ್ಣಿ, ರವೀಂದ್ರ ದೇಶಪಾಂಡೆ, ಅಪ್ಪಾರಾವ್ ಟಕ್ಕಳಕಿ, ಆರ್ ಬಿ ಜೋಶಿ ಇತರರಿದ್ದರು.

# ಸಾಹಿತಿ ಪ್ರೊ. ದೊಡ್ಡಣ್ಣ ಭಜಂತ್ರಿಯವರಿಗೆ ಸಾಹಿತ್ಯಭೂಷಣ ಪ್ರಶಸ್ತಿ ಪ್ರದಾನ

**ವಿಜಯಪುರ :** ಸಾಹಿತಿ ಪ್ರೊ. ದೊಡ್ಡಣ್ಣ ಭಜಂತ್ರಿ ಅವರಿಗೆ ಸಾಹಿತ್ಯ ಭೂಷಣ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ಬಬಲೇಶ್ವರ ತಾಲೂಕಿನ ವಿಜಯಪುರ ಜಿಲ್ಲೆಯ ನಿಡೋಣಿ ಗ್ರಾಮದಲ್ಲಿ ಜರುಗಿದ 918ನೇ ಚಂದಯ್ಯ ಶರಣರ ಜಯಂತಿಯ ಆಚರಣೆಯ ಕಾರ್ಯಕ್ರಮದಲ್ಲಿ ನಿಡೋಣಿಯ ಕಾಯಕಯೋಗಿ ಶರಣ ನುಲಿಯ ಚಂದಯ್ಯ ಭಜಂತ್ರಿ ಅಭಿವೃದ್ಧಿ ಸಂಘದವರು ಖ್ಯಾತ ಬಂಡಾಯ ಸಾಹಿತಿ ಪ್ರೊ. ದೊಡ್ಡಣ್ಣಬಜಂತ್ರಿಅವರಿಗೆ"ಸಾಹಿತ್ಯಭೂಷಣ"ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ಪ್ರೊ. ದೊಡ್ಡಣ್ಣ ಭಜಂತ್ರಿಯವರು ಕಾಲ ಕೆಟ್ಟತ ತಂಗಿ, ಲಚ್ಚ, ತುಂತುರು, ತಲ್ಲಣದ ಹಕ್ಕಿಹಾಡು, ಒಲೆಯ ಹೊಕ್ಕು, ಸೂಜಿ ಮಲ್ಲಿಗೆ ಹೀಗೆ 6 ಕವನ ಸಂಕಲನ ಮತ್ತು ಎರಡು ನಾಟಕಗಳು ಹಾಗೂ ಕ್ಷಯಾಂಬರ ವಿನೋದ ಕಥಾ ಸಂಕಲನ ಅಲ್ಲದೆ ಜಾನಪದ ಸಂಭ್ರಮ ಮುಂತಾದ ಕೃತಿಗಳನ್ನುರಚಿಸಿ ಕನ್ನಡ ಸಾಹಿತ್ಯಕ್ಕೆ ಕೊಡುಗೆ ನೀಡಿದ್ದಾರೆ.



"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State